ಸಂಪಾದಕರು: ರವಿಕುಮಾರ್ ಸಿ.ಹೆಚ್.
RNI: KARKAN/2021/80805
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ


ಸೂರ್ಯ ಪ್ರಗತಿ

SURYA PRAGATHI Kannada daily
SP NEWS ಡಿಜಿಟಲ್ ನ್ಯೂಸ್ ಕಹಾನಿ
ಪ್ರತಿ ಸುದ್ದಿಯ ಧ್ವನಿ

suryapragathidailynews@gmail.com 9901010109 L2/RNP-1285/TMR/2025-27

Volume:05 Issue:176
ಸಂಪುಟ: 05 ಸಂಚಿಕೆ: 176
Date:04-08-2026 Tuesday
RNI NO : KARKAN/2021/80805 L2/RNP-1285/TMR/2025-27
Page :4 ಪುಟ : 4
Price: 1.00 ಬೆಲೆ: 1.00 ರೂ

ಆದೇಶಗಳನ್ನು ಪಾಲಿಸಲು ಕರ್ನಾಟಕ ಸರ್ಕಾರ ವಿಫಲ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ



ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಮತ್ತು ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶಗಳನ್ನು ಪಾಲಿಸಲು ಕರ್ನಾಟಕ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ, ತಮಿಳುನಾಡು ಸರ್ಕಾರ ಸೋಮವಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಅಧಿಕೃತ ಪ್ರಕಟಣೆಯ ಪ್ರಕಾರ, **CWMA** ಮತ್ತು **CWRC** ನಿರ್ದೇಶನಗಳನ್ನು ನೀಡಿದ್ದರೂ ಕರ್ನಾಟಕವು ಕಡ್ಡಾಯವಾಗಿ ತಮಿಳುನಾಡಿಗೆ ಬಿಡಬೇಕಾದ ನೀರು ಬಿಡಲು ವಿಫಲವಾಗಿದೆ. ಹೀಗಾಗಿ ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರ ಸೂಚನೆಯ ಮೇರೆಗೆ ಸೋಮವಾರ ಸುಪ್ರೀಂ ಕೋರ್ಟ್ ನಲ್ಲಿ ಅರ್ಜಿ ಸಲ್ಲಿಸಲಾಗಿದೆ.

ಜುಲೈ 28, 2026 ರಂದು ನಡೆದ ತನ್ನ 139ನೇ ಸಭೆಯಲ್ಲಿ, ಕಾವೇರಿ ಜಲಾನಯನ ಪ್ರದೇಶದ ಜಲವಿಜ್ಞಾನ ಮತ್ತು ಹವಾಮಾನ ಪರಿಸ್ಥಿತಿಗಳನ್ನು ನಿರ್ಣಯಿಸಿದ ನಂತರ, ಕರ್ನಾಟಕವು ಜುಲೈ 29 ರಿಂದ ಆಗಸ್ಟ್ 12, 2026 ರವರೆಗೆ ಕೃಷ್ಣ ರಾಜ ಸಾಗರ(ಕೆಆರ್‌ಎಸ್) ಮತ್ತು ಕಬಿನಿ ಜಲಾಶಯಗಳಿಂದ ಬಿಳಿಗುಂಡ್ಲುವಿಗೆ 3,500 ಕ್ಯೂಸೆಕ್ ನೀರು ಬಿಡುಗಡೆ ಮಾಡುವಂತೆ ನಿರ್ದೇಶಿಸಿತ್ತು. ನಂತರ ಜುಲೈ 30 ರಂದು ನಡೆದ ಸಿಡಬ್ಲ್ಯೂಎಂಎಯ 54 ನೇ ತುರ್ತು ಸಭೆಯಲ್ಲಿ ಈ ನಿರ್ಧಾರವನ್ನು ಅನುಮೋದಿಸಲಾಯಿತು.

ಆದಾಗ್ಯೂ, ಜುಲೈ 29 ಮತ್ತು ಆಗಸ್ಟ್ 2 ರ ನಡುವೆ, ಬಿಳಿಗುಂಡ್ಲುವಿನ ನಿಜವಾದ ಒಳಹರಿವು 158 ರಿಂದ 550 ಕ್ಯೂಸೆಕ್‌ಗಳ ನಡುವೆ ಮಾತ್ರ ಇತ್ತು. ಇದು ಅಧಿಕಾರಿಗಳು ಆದೇಶಿಸಿದ ಪ್ರಮಾಣಕ್ಕಿಂತ ಬಹಳ ಕಡಿಮೆ ಎಂದು ತಮಿಳುನಾಡು ಸರ್ಕಾರ ಹೇಳಿದೆ.

ತಮಿಳುನಾಡಿನ ವಾದದ ಪ್ರಕಾರ, ರಾಜ್ಯಕ್ಕೆ ಅನುಪಾತದ ಆಧಾರದ ಮೇಲೆ 26.954 ಟಿಎಂಸಿ ನೀರು ದೊರಕಬೇಕಿದೆ. ತನ್ನ ಪಾಲಿನ ನೀರನ್ನು ಯಾವುದೇ ವಿಳಂಬವಿಲ್ಲದೆ ಬಿಡುಗಡೆ ಮಾಡುವಂತೆ ಕರ್ನಾಟಕಕ್ಕೆ ನಿರ್ದೇಶನ ನೀಡಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ತಮಿಳುನಾಡಿಗೆ ನೀರು ಬಿಡುಗಡೆ

ಕಾವೇರಿ ಜಲಾನಯನ ಪ್ರದೇಶದಲ್ಲಿ ವಾರದಿಂದ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ಪ್ರಮುಖ ಜಲಾಶಯಗಳಿಗೆ ಭಾರಿ ಪ್ರಮಾಣದ ನೀರು ಹರಿದು ಬರುತ್ತಿದೆ. ಮೈಸೂರು ಜಿಲ್ಲೆಯ ಹೆಮ್ಮೆಯ ಕಬಿನಿ ಜಲಾಶಯ ಈಗಾಗಲೇ ಭರ್ತಿಯಾಗಿದ್ದು, ತಮಿಳುನಾಡಿನತ್ತ ಕಾವೇರಿ ನೀರು ಈ ಜಲಾಶಯದಿಂದ ಹರಿಯಲಾರಂಭಿಸಿದೆ.

ಸಿದ್ದರಾಮಯ್ಯನವರ ಸಂಪುಟದಲ್ಲಿ ನನಗೂ ಸಚಿವ ಸ್ಥಾನ ಸಿಕ್ಕಿರಲಿಲ್ಲ.



ಬಹುನಿರೀಕ್ಷಿತ ಕರ್ನಾಟಕ ಸಚಿವ ಸಂಪುಟ ವಿಸ್ತರಣೆಯ ಹಿನ್ನೆಲೆಯಲ್ಲಿ, ನಿರಾಶೆಗೊಂಡಿರುವ ಕಾಂಗ್ರೆಸ್ ಶಾಸಕರು ಸಂಯಮದಿಂದ ಇರುವಂತೆ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಮನವಿ ಮಾಡಿದರು. ತಾವೂ ಕೂಡ ಒಮ್ಮೆ ಸಚಿವರಾಗುವ ಅವಕಾಶವನ್ನು ಕಳೆದುಕೊಂಡಿದ್ದೆ, ನಂತರ ಆ ಅವಕಾಶ ಪಡೆದೆ ಎಂದಿದ್ದಾರೆ.

'ನಮ್ಮಲ್ಲಿ ಅನೇಕ ಶಾಸಕರಿದ್ದಾರೆ, ಎಲ್ಲರಿಗೂ ಅವಕಾಶ ಕಲ್ಪಿಸುವುದು ಸಾಧ್ಯವಿಲ್ಲ. ಹಿಂದೆ ಸಿದ್ದರಾಮಯ್ಯನವರ ಸಂಪುಟದಲ್ಲಿ ನನಗೂ ಸಚಿವ ಸ್ಥಾನ ಸಿಕ್ಕಿರಲಿಲ್ಲ. ಆದರೆ ನಂತರ ನಾನು ಸಚಿವನಾಗಲಿಲ್ಲವೇ? ಅದೇ ರೀತಿ, ಮುಂದಿನ ದಿನಗಳಲ್ಲಿ ಎಲ್ಲರಿಗೂ ಅವಕಾಶ ನೀಡುತ್ತೇವೆ' ಎಂದು ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಯಲಿರುವ ಲೋಕ ಭವನಕ್ಕೆ ತೆರಳುವ ಮುನ್ನ ಶಿವಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

ಸಚಿವ ಸಂಪುಟ ವಿಸ್ತರಣೆಯಲ್ಲಿ ಹಲವು ಹಿರಿಯ ನಾಯಕರಿಗೆ ಸ್ಥಾನ ಸಿಗದಿದ್ದರಿಂದ ಕಾಂಗ್ರೆಸ್‌ನಲ್ಲಿ ಅಸಮಾಧಾನ ಹೆಚ್ಚುತ್ತಿರುವ ನಡುವೆಯೇ ಅವರ ಈ ಹೇಳಿಕೆ ಹೊರಬಿದ್ದಿದೆ. ಸಚಿವ ಸ್ಥಾನದ ನಿರೀಕ್ಷೆಯಲ್ಲಿದ್ದ ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ್ ಅವರು, ಕೊನೇ ಗಳಿಗೆಯಲ್ಲಿ ಸಚಿವ ಸ್ಥಾನಕ್ಕೆ ಕೈ ತಪ್ಪಿದ್ದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಸೋಮವಾರ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಪಾಟೀಲ್ ಅವರು ವಿಧಾನಸೌಧದಲ್ಲಿ ಉಪಸಭಾಪತಿ ರುದ್ರಪ್ಪ ಲಮಾಣಿ ಅವರಿಗೆ ತಮ್ಮ ರಾಜೀನಾಮೆ ಪತ್ರವನ್ನು ಸಲ್ಲಿಸಿದರು. ತಕ್ಷಣವೇ ಅವರ ಬೆಂಬಲಿಗರು ಘೋಷಣೆಗಳನ್ನು ಕೂಗುತ್ತಾ ಹಾಗೂ ಪಕ್ಷದ ನಾಯಕತ್ವವು ಅವರೊಂದಿಗೆ ಅನ್ಯಾಯವಾಗಿ ವರ್ತಿಸಿದೆ ಎಂದು ಆರೋಪಿಸುತ್ತಾ ಪ್ರತಿಭಟನೆ ನಡೆಸಿದರು.

ಕೆಟ್ಟ ಸಂಪ್ರದಾಯಕ್ಕೆ ಕಾಂಗ್ರೆಸ್ ಪಕ್ಷ ನಾಂದಿ ಬಿಜೆಪಿ ಶಾಸಕ ಸುರೇಶ್ ಕುಮಾರ್ ಕಿಡಿ



ಕಾಂಗ್ರೆಸ್ ಪಕ್ಷದ ಲೆಟರ್ ಹೆಡ್‌ನಲ್ಲಿ ಸಾಂವಿಧಾನಿಕ ಹುದ್ದೆಗಳ ನೇಮಕದ ಬಗ್ಗೆ ಉಲ್ಲೇಖ: ಬಿಜೆಪಿ ಶಾಸಕ ಸುರೇಶ್ ಕುಮಾರ್ ಕಿಡಿ

ಕಾಂಗ್ರೆಸ್ ಹೈಕಮಾಂಡ್ ಬಿಡುಗಡೆ ಮಾಡಿದ ನೂತನ ಸಚಿವರ ಹಾಗೂ ಸಾಂವಿಧಾನಿಕ ಹುದ್ದೆಗಳ ನೇಮಕಾತಿ ಪಟ್ಟಿಯು ಹೊಸ ರಾಜಕೀಯ ವಿವಾದಕ್ಕೆ ಕಾರಣವಾಗಿದೆ. ಸ್ಪೀಕರ್ ಮತ್ತು ಸಭಾಪತಿಯಂತಹ ಪಕ್ಷಾತೀತ ಅತ್ಯುನ್ನತ ಹುದ್ದೆಗಳ ಹೆಸರುಗಳನ್ನು ಕಾಂಗ್ರೆಸ್ ತನ್ನ ಅಧಿಕೃತ ಪಕ್ಷದ ಲೆಟರ್‌ಹೆಡ್‌ನಲ್ಲಿ ಪ್ರಕಟಿಸಿರುವುದಕ್ಕೆ ಮಾಜಿ ಸಚಿವ ಹಾಗೂ ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸಿಎಂ ಡಿಕೆ ಶಿವಕುಮಾರ್ ಅವರ ಸಚಿವ ಸಂಪುಟಕ್ಕೆ ಸೇರ್ಪಡೆಯಾಗಲಿರುವ ಶಾಸಕರ ಹೆಸರಿನ ಜೊತೆಗೆ ವಿಧಾನಸಭೆಯ ಸ್ಪೀಕರ್, ಡೆಪ್ಯೂಟಿ ಸ್ಪೀಕರ್ ಮತ್ತು ಸಭಾಪತಿ, ಉಪ ಸಭಾಪತಿ ಹುದ್ದೆಗಳಿಗೂ ನೇಮಕ ಸಂಬಂಧ ಪಕ್ಷದ ಪತ್ರ ಶೀರ್ಷಿಕೆಯಲ್ಲಿ (ಲೆಟರ್‌ಹೆಡ್) ಕಾಂಗ್ರೆಸ್ ಹೈಕಮಾಂಡ್ ಉಲ್ಲೇಖಿಸಿರುವುದೀಗ ತೀವ್ರ ಆಕ್ಷೇಪಕ್ಕೆ ಕಾರಣವಾಗಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವ ಮೂಲಕ ಆಕ್ರೋಶ ವ್ಯಕ್ತಪಡಿಸಿರುವ ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್, ಮತ್ತೊಂದು ಕೆಟ್ಟ ಸಂಪ್ರದಾಯಕ್ಕೆ ಕಾಂಗ್ರೆಸ್ ಪಕ್ಷ ನಾಂದಿ ಹಾಡಿದೆ ಎಂದು ಕಿಡಿ ಕಾರಿದ್ದಾರೆ.

'ಸಾಂವಿಧಾನಿಕ ಹುದ್ದೆಗಳ ಘನತೆಗೆ ಧಕ್ಕೆ'

ವಿಧಾನಸಭೆಯ ಮಾನ್ಯ ಸಭಾಧ್ಯಕ್ಷರು, ಮಾನ್ಯ ಉಪಸಭಾಧ್ಯಕ್ಷರು ಹಾಗೂ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಗಳು ಮತ್ತು ಉಪಸಭಾಪತಿ ಹುದ್ದೆಗಳು ಯಾವುದೇ ರಾಜಕೀಯ ಪಕ್ಷದ ವ್ಯಾಪ್ತಿಗೆ ಸೀಮಿತವಾಗದ, ಅತ್ಯುನ್ನತ ಸಾಂವಿಧಾನಿಕ ಸ್ಥಾನಗಳಾಗಿವೆ. ಈ ಹುದ್ದೆಗಳು ತಮ್ಮದೇ ಆದ ಘನತೆ, ಗೌರವ, ನಿಷ್ಪಕ್ಷಪಾತತೆ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪ್ರತಿನಿಧಿಸುವ ಪರಂಪರೆಯನ್ನು ಹೊಂದಿವೆ. ಆದರೆ, ಕಾಂಗ್ರೆಸ್ ತನ್ನ ಅಧಿಕೃತ ಪಕ್ಷದ ಪತ್ರ ಶೀರ್ಷಿಕೆಯಲ್ಲಿ ಈ ಸಾಂವಿಧಾನಿಕ ಹುದ್ದೆಗಳ ಹೆಸರನ್ನು ಬಳಸಿರುವುದು ಅತ್ಯಂತ ಆಕ್ಷೇಪಾರ್ಹ. ಇಂತಹ ನಡೆ ಈ ಹುದ್ದೆಗಳ ಪಕ್ಷಾತೀತ ಸ್ವರೂಪಕ್ಕೆ ಧಕ್ಕೆ ತರುವುದಲ್ಲದೆ, ಅವುಗಳ ಘನತೆ ಮತ್ತು ಗೌರವಕ್ಕೂ ಕಳಂಕ ತರುವ ಪ್ರಯತ್ನವಾಗಿದೆ ಎಂದಿದ್ದಾರೆ.

'ಕಾಂಗ್ರೆಸ್‌ನ ದ್ವಂದ್ವ ನೀತಿ ಮತ್ತೊಮ್ಮೆ ಬಹಿರಂಗ'

ತನಗೆ ಗೊತ್ತಿರುವಂತೆ ಮುಂದೆ ಆಯ್ಕೆಯಾಗಬೇಕಿರುವ ಸಭಾಧ್ಯಕ್ಷರ, ಉಪಸಭಾಧ್ಯಕ್ಷರ, ಸಭಾಪತಿಗಳ ಹಾಗೂ ಉಪ ಸಭಾಪತಿಗಳ ಹೆಸರುಗಳನ್ನು ಆಳುವ ಪಕ್ಷದ ಲೆಟರ್ ಹೆಡ್ ನಲ್ಲಿ ದೆಹಲಿಯಿಂದಲೇ ಕಳುಹಿಸುತ್ತಿರುವುದು ಇದೇ ಮೊದಲ ಬಾರಿ. ಇದು ಕೇವಲ ಸಂಸದೀಯ ಸಂಪ್ರದಾಯಗಳ ಉಲ್ಲಂಘನೆಯಷ್ಟೇ ಅಲ್ಲ; ಸಾಂವಿಧಾನಿಕ ಮೌಲ್ಯಗಳು ಮತ್ತು ಪ್ರಜಾಪ್ರಭುತ್ವದ ಮೂಲಭೂತ ತತ್ವಗಳ ಮೇಲಿನ ನಿರ್ಲಕ್ಷ್ಯದ ಪ್ರತೀಕವಾಗಿದೆ. ಬಾಯಲ್ಲಿ ಸಂವಿಧಾನದ ರಕ್ಷಣೆ ಎಂದು ಹೇಳಿಕೊಂಡು, ಆಚರಣೆಯಲ್ಲಿ ಸಾಂವಿಧಾನಿಕ ಸಂಸ್ಥೆಗಳು ಮತ್ತು ಉನ್ನತ ಹುದ್ದೆಗಳನ್ನು ಪಕ್ಷದ ರಾಜಕೀಯ ಉದ್ದೇಶಗಳಿಗೆ ಬಳಸಿಕೊಳ್ಳುವ ಕಾಂಗ್ರೆಸ್‌ನ ದ್ವಂದ್ವ ನೀತಿ ಮತ್ತೊಮ್ಮೆ ಬಹಿರಂಗವಾಗಿದೆ ಎಂದವರು ಆರೋಪಿಸಿದ್ದಾರೆ.

ಡಿಕೆ ಶಿವಕುಮಾರ್ ನೇತೃತ್ವದ ಸಚಿವ ಸಂಪುಟ ವಿಸ್ತರಣೆ 19 ಶಾಸಕರು ಸಚಿವರಾಗಿ ಪ್ರಮಾಣವಚನ



ಸೂರ್ಯಪ್ರಗತಿನ್ಯೂಸ್.ಕಾಂ

ಬೆಂಗಳೂರು: ಕೊನೆಗೂ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ನೇತೃತ್ವದ ಸಚಿವ ಸಂಪುಟ ಸೋಮವಾರ ಸಂಜೆ ವಿಸ್ತರಣೆಯಾಗಿದೆ. ಕಾಂಗ್ರೆಸ್ ಹೈಕಮಾಂಡ್ 20 ನೂತನ ಸಚಿವರ ಹೆಸರನ್ನು ಪ್ರಕಟಿಸಿತ್ತಾದರೂ ಕೊನೆ ಕ್ಷಣದಲ್ಲಿ 19 ಮಂದಿ ಮಾತ್ರ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ನೆನ್ನೆಸಂಜೆ 5 ಗಂಟೆಗೆ ಲೋಕಭವನದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಅವರು 19 ಸಚಿವರಿಗೆ ಮಾತ್ರ ಪ್ರತಿಜ್ಞಾವಿಧಿ ಬೋಧಿಸಿದರು.

ಮೊದಲಿಗೆ ಮಾಜಿ ಮುಖ್ಯಮಂತ್ರಿ ದಿವಂಗತ ಧರ್ಮಸಿಂಗ್ ಅವರ ಪುತ್ರ ಡಾ. ಅಜಯ್ ಸಿಂಗ್ ಅವರು ಪ್ರಮಾಣವಚನ ಸ್ವೀಕರಿಸಿದರು. ಬಳಿಕ ಕ್ರಮವಾಗಿ ಎಚ್.ಸಿ.ಬಾಲಕೃಷ್ಣ, ಕೆ.ಎಸ್.ಬಸವಂತಪ್ಪ, ಬಸವರಾಜ್ ರಾಯರೆಡ್ಡಿ, ಎನ್.ಚಲುವರಾಯಸ್ವಾಮಿ, ಲಕ್ಷ್ಮಣ್ ಸವದಿ, ಮಧು ಬಂಗಾರಪ್ಪ, ಎಸ್.ಎಸ್.ಮಲ್ಲಿಕಾರ್ಜುನ್, ಬಿ.ನಾಗೇಂದ್ರ, ಪಿ.ಎಂ.ನರೇಂದ್ರಸ್ವಾಮಿ, ಸಿ.ಪುಟ್ಟರಂಗಶೆಟ್ಟಿ, ಟಿ.ರಘುಮೂರ್ತಿ, ರಿಜ್ವಾನ್ ಅರ್ಷದ್, ರುದ್ರಪ್ಪ ಲಮಾಣಿ, ಸಂತೋಷ್ ಲಾಡ್, ಶಿವಲಿಂಗೇಗೌಡ, ಶಿವರಾಜ್ ತಂಗಡಗಿ, ವಿಜಯಾನಂದ ಕಾಶಪ್ಪನವರ್, ಜಮೀರ್ ಅಹ್ಮದ್ ಖಾನ್ ಅವರು ಪ್ರಮಾಣವಚನ ಸ್ವೀಕರಿಸಿದರು.

ಈ ಸಮಾರಂಭಕ್ಕೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೈರಾಗಿದ್ದರು.

ಗಾಯತ್ರಿ ಶಾಂತೇಗೌಡಗೆ ಕೊಕ್

ಇದಕ್ಕೂ ಮುನ್ನ, ಎಐಸಿಸಿ ಪ್ರಧಾನ ಕಾರ್ಯದರ್ಶಿ(ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರು ಸಿಎಂ ಶಿವಕುಮಾರ್ ಅವರಿಗೆ ಪತ್ರ ಬರೆದು, ಸಂಪುಟಕ್ಕೆ ಸೇರಿಸಿಕೊಳ್ಳಲು 20 ಸಚಿವರ ಹೆಸರುಗಳನ್ನು ಕಾಂಗ್ರೆಸ್ ಹೈಕಮಾಂಡ್ ಅನುಮೋದಿಸಿರುವ ಬಗ್ಗೆ ಮಾಹಿತಿ ನೀಡಿದ್ದರು.

ಆದಾಗ್ಯೂ, ಕಾಂಗ್ರೆಸ್ ಹೈಕಮಾಂಡ್ ಅನುಮೋದಿಸಿದ ಅಂತಿಮ ಪಟ್ಟಿಯಲ್ಲಿದ್ದ ಗಾಯತ್ರಿ ಶಾಂತೇಗೌಡ ಅವರು ಸೋಮವಾರ ಪ್ರಮಾಣವಚನ ಸ್ವೀಕರಿಸಲಿಲ್ಲ. ಇದರೊಂದಿಗೆ ಕರ್ನಾಟಕ ಸಚಿವ ಸಂಪುಟದಲ್ಲಿ ಮಹಿಳಾ ಪ್ರಾತಿನಿಧ್ಯ ಇಲ್ಲದಂತಾಗಿದೆ. ಕೊನೇ ಕ್ಷಣದಲ್ಲಿ ನಡೆದ ದಿಢೀರ್ ರಾಜಕೀಯ ಬೆಳವಣಿಗೆಗಳಿಂದಾಗಿ ಈ ನಿರ್ಧಾರಕ್ಕೆ ಬರಲಾಗಿದ್ದು, ಮಹಿಳಾ ಶಾಸಕರ ನಡುವಿನ ತೀವ್ರ ಪೈಪೋಟಿಯೇ ಇದಕ್ಕೆ ಕಾರಣ ಎನ್ನಲಾಗಿದೆ.

20 ಮಂದಿ ನೂತನ ಸಚಿವರ ಪಟ್ಟಿಯಲ್ಲಿ ಗಾಯತ್ರಿ ಶಾಂತೇಗೌಡ ಅವರ ಹೆಸರಿತ್ತು. ಆದರೆ ಪ್ರಮಾಣವಚನ ಸ್ವೀಕರಿಸಲು ಸಿಎಂ ಕಡೆಯಿಂದ ಅವರಿಗೆ ಯಾವುದೇ ಕರೆ ಬಂದಿಲ್ಲ. ಪರಿಷತ್ ಸದಸ್ಯೆಯಾಗಿ ಗಾಯತ್ರಿ ಇನ್ನೂ ಪ್ರಮಾಣ ಸ್ವೀಕರಿಸಿದ ಕಾರಣ ಪಕ್ಷದಲ್ಲಿ ಈ ಬಗ್ಗೆ ಅಸಮಾಧಾನ ಭುಗಿಲೆದ್ದ ಕಾರಣ, ಪಕ್ಷ ಈ ತೀರ್ಮಾನ ಕೈಗೊಂಡಿರುವ ಮಾಹಿತಿ ಇದೆ.

ಮಹಿಳಾ ಸಚಿವ ಸ್ಥಾನಕ್ಕಾಗಿ ಹಗ್ಗಜಗ್ಗಾಟ

ಮಹಿಳಾ ಸಚಿವ ಸ್ಥಾನಕ್ಕೆ ಗಾಯತ್ರಿ ಅವರ ಹೆಸರು ಘೋಷಣೆ ನಡುವೆಯೂ ಲಕ್ಷ್ಮೀ ಹೆಬ್ಬಾಳ್ಕರ್ ಉಮಾಶ್ರೀ ನಡುವೆ ತೀವ್ರ ಪೈಪೋಟಿ ನಡೆದಿದೆ. ಹೀಗಾಗಿ ಮಾಜಿ ಸಿಎಂ ಸಿದ್ದರಾಮಯ್ಯನವರ ನಿವಾಸದಲ್ಲಿ ಮಹತ್ವದ ಸಭೆ ನಡೆಸಲಾಗಿದ್ದು, ಕೊನೆ ಕ್ಷಣದಲ್ಲಿ ಗಾಯತ್ರಿ ಹೆಸರು ಬಿಡಲೇಬೇಕು ಎಂಬ ರಾಜ್ಯ ನಾಯಕರ ಒತ್ತಡಕ್ಕೆ ಕಾಂಗ್ರೆಸ್ ವರಿಷ್ಠರು ಮಣಿದಿದ್ದಾರೆ.

ಎಸ್‌ಐಆರ್ ಪ್ರಕ್ರಿಯೆ; ಶೇ. 88.89ರಷ್ಟು ಪ್ರಗತಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್)–2026 ಪ್ರಕ್ರಿಯೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಈವರೆಗೂ ಶೇ. 88.89ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯು ಸಮರ್ಪಕವಾಗಿ ನಡೆಯುತ್ತಿದೆ. ಈಗಾಗಲೇ ಒಟ್ಟು 20,43,439 ಗಣತಿ ನಮೂನೆಗಳನ್ನು ಗಣಕೀಕರಣಗೊಳಿಸಲಾಗಿದ್ದು, 37,842 ಗಣತಿ ನಮೂನೆಗಳನ್ನು ಗಣಕೀಕರಣಗೊಳಿಸಬೇಕಾಗಿದೆ. ಗಣತಿ ನಮೂನೆಗಳನ್ನು ನಿಯಮಾನುಸಾರ ಕೊನೆಯ ದಿನವಾದ ಆಗಸ್ಟ್ 8ರೊಳಗೆ ಹಿಂಪಡೆದು ಗಣಕೀಕರಣಗೊಳಿಸಬೇಕಿರುವುದರಿಂದ ಕೂಡಲೇ ಮತದಾರರು ತಮ್ಮ ಭರ್ತಿ ಮಾಡಿದ ಗಣತಿ ನಮೂನೆಯನ್ನು ಮತಗಟ್ಟೆ ಅಧಿಕಾರಿಗಳಿಗೆ ತ್ವರಿತವಾಗಿ ಹಿಂತಿರುಗಿಸುವ ಮೂಲಕ ಎಸ್‌ಐಆರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸಹಕರಿಸಬೇಕೆಂದು ಜಿಲ್ಲಾಧಿಕಾರಿ ಮನವಿ ಮಾಡಿದ್ದಾರೆ. ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿ ಕಚೇರಿ, ನಗರ ಸ್ಥಳೀಯ ಸಂಸ್ಥೆ ಹಾಗೂ ತುಮಕೂರು ಮಹಾ ನಗರಪಾಲಿಕೆಯ ಎಲ್ಲಾ ವಾರ್ಡುಗಳಲ್ಲಿ ಮತದಾರರ ಸಹಾಯವಾಣಿ ಕೇಂದ್ರಗಳನ್ನು ಸಾರ್ವಜನಿಕರ ಸಹಾಯಕ್ಕಾಗಿ ಸ್ಥಾಪಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳಬೇಕು. ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ಕಾಗಿ ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಿಗೆ 2627 ಮತಗಟ್ಟೆ ಮಟ್ಟದ ಅಧಿಕಾರಿಗಳನ್ನು ನೇಮಿಸಲಾಗಿದೆ. ಯಾವುದೇ ಸಮಸ್ಯೆಗಳಿದ್ದಲ್ಲಿ ಅರ್ಹ ಮತದಾರರು ಸಂಬಂಧಿಸಿದ ಮತಗಟ್ಟೆ ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಎಸ್‌ಐಆರ್ ಪ್ರಕ್ರಿಯೆಯಲ್ಲಿ ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆಗೆ ಬಾರದೆ, ಗಣತಿ ನಮೂನೆ ಹಿಂಪಡೆಯದಿದ್ದಲ್ಲಿ, ಸರಿಯಾದ ಮಾಹಿತಿ ನೀಡದಿದ್ದಲ್ಲಿ ಇಂತಹ ಯಾವುದೇ ಸಮಸ್ಯೆಗಳಿದ್ದಲ್ಲಿ ಮತದಾರರು ಸಹಾಯವಾಣಿ ಮೊಬೈಲ್ ಸಂಖ್ಯೆ 7304975519 ಅಥವಾ ಸ್ಥಿರ ದೂರವಾಣಿ ಸಂಖ್ಯೆ 0816–2213400ಗೆ ಕರೆ ಮಾಡಿ ತಮ್ಮ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಿಕೊಂಡು ಪ್ರಕ್ರಿಯೆಗೆ ಸಹಕಾರ ನೀಡುವಂತೆ ಅವರು ತಿಳಿಸಿದ್ದಾರೆ.



ಮತದಾರರು ತಮ್ಮ ಮಾಹಿತಿ ನೀಡುವಾಗ ಯಾವುದೇ ಕಾರಣಕ್ಕೆ ತಪ್ಪು ಮಾಹಿತಿ ಅಥವಾ ಪುನರಾವರ್ತಿತ ಮತದಾರರು ಎಂಬ ಮಾಹಿತಿ ಲಭ್ಯವಾದರೆ ಅಂತಹವರ ವಿರುದ್ಧ ಶಿಕ್ಷಾರ್ಹ ಅಪರಾಧದ ದಂಡನೆಯನ್ನು ವಿಧಿಸಲು ಅವಕಾಶವಿರುತ್ತದೆ. ಆದ್ದರಿಂದ ಮತದಾರರು ಎಚ್ಚರ ವಹಿಸಬೇಕು ಎಂದು ತಿಳಿಸಿದ್ದಾರೆ.

ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಬಿಎಲ್‌ಎಗಳನ್ನು ನೇಮಿಸಲಾಗಿದ್ದು, ಮತದಾರರ ಪಟ್ಟಿಯಿಂದ ಹೊರಗುಳಿಯಬಹುದಾದ ಮತದಾರರ ಲಭ್ಯ ಮಾಹಿತಿಯನ್ನು ನೀಡಲಾಗಿದೆ. ಕರಡು ಮತದಾರರ ಪಟ್ಟಿ ಪ್ರಕಟ ನಂತರ ಮತದಾರರು ತಮ್ಮ ಹಕ್ಕು ಆಕ್ಷೇಪಣೆಗಳನ್ನು ಸೂಕ್ತ ದಾಖಲೆಯೊಂದಿಗೆ ಸಲ್ಲಿಸಲು ಆಗಸ್ಟ್ 17 ರಿಂದ ಸೆಪ್ಟೆಂಬರ್ 16ರವರೆಗೆ ಕಾಲಾವಕಾಶವಿದ್ದು, ಅಕ್ಟೋಬರ್ 19ರಂದು ಅಂತಿಮ ಮತದಾರರ ಪಟ್ಟಿ ಪ್ರಕಟವಾಗುವುದರಿಂದ ಅದಕ್ಕೆ ಪೂರ್ವದಲ್ಲಿಯೇ ಸರಿಪಡಿಸಿಕೊಂಡು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವಂತೆ ನೋಡಿಕೊಳ್ಳಬೇಕು ಎಂದು ಅವರು ಮನವಿ ಮಾಡಿದ್ದಾರೆ.



ತುಮಕೂರು ನಗರದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಚಿಕ್ಕಪೇಟೆಯ ವಾಸವಿ ಮಹಿಳಾ ಮಂಡಳಿ ಆಯೋಜಿಸಿದ್ದ ಗಾಳಿಪಟ ಸ್ಪರ್ಧೆಗೆ ಜಿಲ್ಲಾಧಿಕಾರಿ ಶುಭಕಲ್ಯಾಣ್ ಚಾಲನೆ ನೀಡಿದರು. ವಾಸವಿ ಮಹಿಳಾ ಸಂಘದ ಅಧ್ಯಕ್ಷೆ ವಾಸವಿ ಗುಪ್ತ, ಕೇಂದ್ರ ಕಲಾ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಜಿ.ದ್ರಾಕ್ಷಾಯಣಿ, ಉಪಾಧ್ಯಕ್ಷೆ ಗೀತಾ ಬಾಲರಾಜು, ಕಾರ್ಯದರ್ಶಿ ಆಶಾ ರಮೇಶ್, ಖಜಾಂಚಿ ಕೆ.ಎಸ್.ದೀಪಾ, ಸಹಕಾರ್ಯದರ್ಶಿ ಕಿರಣ್, ವೈಶ್ಯ ಕೋ–ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷ ಗೋವಿಂದರಾಜು ಹಾಗೂ ಗಾಳಿಪಟ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಮಕ್ಕಳು ಉಪಸ್ಥಿತರಿದ್ದರು.

ಬಂದ್‌ಗೆ ಕನ್ನಡ ಪರ, ಇತರೆ ಸಂಘಗಳ ಒಕ್ಕೂಟ ಬೆಂಬಲ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ತಮಿಳುನಾಡಿಗೆ ಕಾವೇರಿ ನೀರು ಬಿಡುವುದನ್ನು ವಿರೋಧಿಸಿ ಕನ್ನಡಪರ ಸಂಘಟನೆಗಳ ಒಕ್ಕೂಟ ಕರೆನೀಡಿರುವ ಈ ತಿಂಗಳ 13ರ ಕರ್ನಾಟಕ ಬಂದ್‌ಗೆ ನಗರದ ಕನ್ನಡಪರ ಹಾಗೂ ಇತರೆ ಸಂಘಗಳ ಒಕ್ಕೂಟ ಬೆಂಬಲ ನೀಡಿದೆ. ಈ ಸಂಬಂಧ ನಗರದಲ್ಲಿ ಸಭೆ ಸೇರಿ ಚರ್ಚಿಸಿದ ಸಂಘಟನೆಗಳ ಮುಖಂಡರು 13ರ ಬಂದ್ ಹೋರಾಟದಲ್ಲಿ ಭಾಗವಹಿಸಲು ತೀರ್ಮಾನಿಸಿದರು.

ಒಕ್ಕೂಟದ ಅಧ್ಯಕ್ಷ ಎಂ ಗೋಪಿ ಮಾತನಾಡಿ, ಕಾವೇರಿ ನೀರು ನಿಯಂತ್ರಣ ಸಮಿತಿ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಆದೇಶ ರಾಜ್ಯದ ಜನರಿಗೆ ಮಾರಕವಾಗಿದೆ. ಮಳೆ ಇಲ್ಲದೆ, ಕುಡಿಯುವ ನೀರಿಗೂ ತೊಂದರೆಯಾಗಿ ಹಾಹಾಕಾರ ಪರಿಸ್ಥಿತಿ ಇರುವಾಗ ತಮಿಳುನಾಡಿಗೆ ಕಾವೇರಿ ನೀರು ಹರಿಸುವ ನಿರ್ಧಾರ ಅಮಾನವೀಯ. ಇದರ ವಿರುದ್ಧ ರಾಜ್ಯದ ಎಲ್ಲಾ ಶಾಸಕರು, ಸಂಸದರು ಪಕ್ಷಾತೀತವಾಗಿ ಧ್ವನಿ ಎತ್ತಬೇಕು, ಕನ್ನಡಿಗರ ಹಿತ ಕಾಪಾಡಬೇಕು ಎಂದು ಒತ್ತಾಯಿಸಿದರು. ದಲಿತ ಸಂಘರ್ಷ ಸಮಿತಿ ಜಿಲ್ಲಾಧ್ಯಕ್ಷ ಪಿ.ಎನ್. ರಾಮಯ್ಯ ಮಾತನಾಡಿ,



ಕಾವೇರಿ ನೀರು ನಿಯಂತ್ರಣ ಸಮಿತಿ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀಡಿರುವ ಆದೇಶವನ್ನು ರಾಜ್ಯದ ಹಿತಾಸಕ್ತಿಯ ಆಧಾರದ ಮೇಲೆ ಸರ್ಕಾರ ಬಲವಾಗಿ ವಿರೋಧಿಸಬೇಕು. ರಾಜ್ಯದ ಜಲಾಶಯಗಳ ವಾಸ್ತವಿಕ ನೀರಿನ ಸಂಗ್ರಹಣೆ ಹಾಗೂ ಮಳೆಯ ಕೊರತೆಯ ಕುರಿತು ಸಮಗ್ರ ವರದಿಯನ್ನು ಸಲ್ಲಿಸಿ ಕರ್ನಾಟಕದ ಪರವಾಗಿ ವಾದ ಮಂಡಿಸುವಲ್ಲಿ ನಮ್ಮ ಪರ ನ್ಯಾಯವಾದಿಗಳು ಪದೇಪದೆ ವಿಫಲವಾಗುತ್ತಿರುವುದು ದುರಾದೃಷ್ಟಕರ. ನ್ಯಾಯ ಮಂಡನೆಗಾಗಿ ಸರ್ಕಾರ ಸಾರ್ವಜನಿಕರ ಕೋಟ್ಯಾಂತರ ರೂ.ಖರ್ಚು ಮಾಡಿದರೂ ನಮಗೆ ನ್ಯಾಯ ಸಿಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯದ ಸಂಸದರು ಪ್ರಧಾನ ಮಂತ್ರಿಗಳನ್ನು ಭೇಟಿ ನೀಡಿ, ಕಾವೇರಿ ನೀರಿನ ಸಮಸ್ಯೆಗೆ ಕಾನೂನಾತ್ಮಕವಾಗಿ ಶಾಶ್ವತ ಪರಿಹಾರ ಮಾಡಬೇಕು. ಕರ್ನಾಟಕ ರಾಜ್ಯ ಸರ್ಕಾರವೂ ಜನರ ಪರಿಸ್ಥಿತಿ ಅರಿತು ಸರಿಯಾದ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಹೇಳಿದರು.

ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಬಾಬಾ, ಸಂಘಟನಾ ಕಾರ್ಯದರ್ಶಿ ಟಿ.ಎಸ್. ರಕ್ಷಿತ್ ಕುಮಾರ್, ಖಜಾಂಚಿ ಕನ್ನಡ ಪ್ರಕಾಶ್, ಕರ್ನಾಟಕ ಕಲಾವಿದರ ಒಕ್ಕೂಟದ ಅಧ್ಯಕ್ಷ ವೀರೇಶ್‌ಪ್ರಸಾದ್ ಗುಬ್ಬಿ, ಮುಖಂಡರಾದ ರಾಜಣ್ಣ, ಆದಿಲ್ ಬಾಷಾ, ಗಂಗಾಧರ್, ಷಾಹೀದ್ ಖಾನ್, ಶಾಮೀದ್‌ಖಾನ್, ಗೌಸ್‌ಖಾನ್ ಮೊದಲಾದವರು

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

"ಕಾವೇರಿ ನಮ್ಮದು, ಪ್ರಾಣ ಬೇಕಾದರೂ ಬಿಡ್ತಿವಿ"

ಸೂರ್ಯಪ್ರಗತಿನ್ಯೂಸ್.ಕಾಂ

ಕೊರಟಗೆರೆ: ರಾಜ್ಯದಲ್ಲಿ ಮಳೆ ಕೊರತೆಯಿಂದ ಕುಡಿಯುವ ನೀರಿಗೆ ಹಾಹಾಕಾರ ಎದುರಾಗಿರುವ ಹಿನ್ನೆಲೆಯಲ್ಲಿ ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸುವುದನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದವರು ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ಪಟ್ಟಣದ ಎಸ್.ಎಸ್.ಆರ್ ವೃತ್ತದಿಂದ ತಾಲೂಕು ಕಚೇರಿಯವರೆಗೆ ನೀರಿನ ಕೊಡ ಹಿಡಿದು ಮೆರವಣಿಗೆ ನಡೆಸಿದ ಕಾರ್ಯಕರ್ತರು, ತಾಲೂಕು ಕಚೇರಿ ಮುಂದೆ ಪ್ರತಿಭಟಿಸಿ ತಹಶೀಲ್ದಾರ್ ಮಂಜುನಾಥ್ ಅವರಿಗೆ ಮನವಿ ಸಲ್ಲಿಸಿದರು.

ಕರವೇ ತಾ.ಅಧ್ಯಕ್ಷ ನರಸಿಂಹರಾಜು ಮಾತನಾಡಿ, "ರೈತರು ಜಮೀನು ಕೂಡ ಮಾಡಲು ಆಗಿಲ್ಲ. ದನ–ಕರುಗಳಿಗೆ ಮೇವಿಲ್ಲ. ಈ ಸಂದರ್ಭದಲ್ಲಿ ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸಿದರೆ ರಾಜ್ಯದ ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ. ಕಾವೇರಿ ನಮ್ಮದು, ಪ್ರಾಣ ಬೇಕಾದರೂ ಬಿಡ್ತಿವಿ, ನೀರು ಹರಿಸಲು ಬಿಡುವುದಿಲ್ಲ" ಎಂದು ಖಡಕ್ ಎಚ್ಚರಿಕೆ ನೀಡಿದರು.

ಕನ್ನಡ ಪರ ಹೋರಾಟಗಾರ ದಿನೇಶ್ ಕುಮಾರ್ ಮಾತನಾಡಿ,* "ನಮಗೆ ಕುಡಿಯುವ ನೀರೇ



ಇಲ್ಲದಾಗ ಹೊರ ರಾಜ್ಯಕ್ಕೆ ನೀರು ಹರಿಸುವುದು ಅನ್ಯಾಯ. ಕೊರಟಗೆರೆ ತಾಲೂಕನ್ನು ಕೂಡಲೇ ಬರಪೀಡಿತ ಎಂದು ಘೋಷಿಸಬೇಕು" ಎಂದು ಒತ್ತಾಯಿಸಿದರು.

ಸಂಘಟನೆಯ ತಾ.ಉಸ್ತುವಾರಿ ರಾಮಕೃಷ್ಣ ಗೌಡ ಮಾತನಾಡಿ, "ರಾಜ್ಯ ಸರ್ಕಾರ ಕೇಂದ್ರದ ಮುಂದೆ ದೃಢವಾಗಿ ನಿಲ್ಲಬೇಕು. ನಮ್ಮ ಪಾಲಿನ ನೀರನ್ನು ರಕ್ಷಿಸಿಕೊಳ್ಳಲು ಕರವೇ ಯಾವುದೇ ಹೋರಾಟಕ್ಕೂ ಸಿದ್ಧ" ಎಂದು ಆಗ್ರಹಿಸಿದರು.

ಮನವಿ ಸ್ವೀಕರಿಸಿದ ತಹಶೀಲ್ದಾರ್ ಮಂಜುನಾಥ್* ಮಾತನಾಡಿ, "ನಿಮ್ಮ ಬೇಡಿಕೆಗಳನ್ನು ಒಳಗೊಂಡ ಮನವಿಯನ್ನು ಸರ್ಕಾರದ ಗಮನಕ್ಕೆ ತಕ್ಷಣ ತಲುಪಿಸುತ್ತೇನೆ" ಎಂದು ಭರವಸೆ ನೀಡಿದರು.

ಈ ವೇಳೆ ಕರವೇ ಗೌರವಾಧ್ಯಕ್ಷ ಹರೀಶ್ ಬಾಬು, ಪ್ರಧಾನ ಕಾರ್ಯದರ್ಶಿ ಕೃಷ್ಣಮೂರ್ತಿ, ಉಪಾಧ್ಯಕ್ಷ ರವಿಕುಮಾರ್ ಟಿ.ಆರ್, ನಗರ ಉಪಾಧ್ಯಕ್ಷ ಮೂರ್ತಿ, ಸಂಘಟನಾ ಕಾರ್ಯದರ್ಶಿ ಪುಟ್ಟರಾಜ್ ಎನ್.ಎಲ್, ರಮೇಶ್ ಎಲ್.ಎನ್, ಸಂಚಾಲಕ ತೇಜಸ್ ಎಲ್.ಕೆ, ವೀರಕ್ಯಾತಯ್ಯ, ಲೋಕೇಶ್, ಜಯಲಕ್ಷ್ಮೀ, ಗಂಗಮ್ಮ, ಯುವ ಘಟಕ ಉಪಾಧ್ಯಕ್ಷ ಕೇಶವ್, ಗೋವರ್ಧನ್, ಹೇಮಂತ್ ಜಿ.ಆರ್, ಹನುಮಂತರಾಜು, ಧನುಷ್, ಆಟೋ ರಮೇಶ್ ಸೇರಿದಂತೆ ತಾಲೂಕು ಘಟಕದ ಪದಾಧಿಕಾರಿಗಳು ಮತ್ತು ಮಹಿಳೆಯರು ಹಾಜರಿದ್ದರು.

ನೀರಾವರಿ ಹೋರಾಟಗಾರರಿಗೆ ಬೆಂಬಲ:

ಹೇಮಾವತಿ ಕಾಮಗಾರಿ ವಿಳಂಬಕ್ಕೆ ಆಕ್ರೋಶ; ಮಾಜಿ ಶಾಸಕ ಕಿರಣ್ ಕುಮಾರ್

ಸೂರ್ಯಪ್ರಗತಿನ್ಯೂಸ್.ಕಾಂ



ಚಿಕ್ಕನಾಯಕನಹಳ್ಳಿ: ಹೇಮಾವತಿ ನೀರಾವರಿ ಯೋಜನೆಗೆ 102 ಕೋಟಿ ಹಣ ಬಿಡುಗಡೆಯಾದ ತಕ್ಷಣವೇ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಿದ್ದರೆ ಗುತ್ತಿಗೆದಾರರಿಗೂ ಹಾಗೂ ರೈತರಿಗೂ ತೊಂದರೆಯಾಗುತ್ತಿರಲಿಲ್ಲ. ವಿನಾಕಾರಣ ಕಾಮಗಾರಿಯನ್ನು ತಡೆಹಿಡಿದಿದ್ದರಿಂದ ಯೋಜನೆಯು ಇಂದಿಗೂ ಪೂರ್ಣಗೊಂಡಿಲ್ಲದಿರುವುದು ತೀವ್ರ ನೋವಿನ ಸಂಗತಿ ಎಂದು ಮಾಜಿ ಶಾಸಕ ಕೆ.ಎಸ್. ಕಿರಣ್ ಕುಮಾರ್ ಹೇಳಿದ್ದಾರೆ.

ತಾಲೂಕಿನಲ್ಲಿ ಹೇಮಾವತಿ ಕ್ಯಾನಲ್ ಕಾಮಗಾರಿಯನ್ನು ಶೀಘ್ರವಾಗಿ ಮುಗಿಸುವಂತೆ ಆಗ್ರಹಿಸಿ ರೈತರು ನಡೆಸುತ್ತಿರುವ ಅಹೋರಾತ್ರಿ ಧರಣಿ ಸ್ಥಳಕ್ಕೆ ಸೋಮವಾರ ಭೇಟಿ ನೀಡಿ, ಬೆಂಬಲ ಸೂಚಿಸಿ ಅವರು ಮಾತನಾಡಿದರು.

ಜನಪ್ರತಿನಿಧಿಗಳಿಗೆ ಬದ್ಧತೆ ಅಗತ್ಯ:

"ಅಧಿಕಾರ ಅನುಭವಿಸುವವರಿಗೆ ಬದ್ಧತೆ ಇರಬೇಕು. 18 ವರ್ಷಗಳಷ್ಟು ಹಳೆಯ ಯೋಜನೆಯೊಂದು ಇಂದಿಗೂ ಪೂರ್ಣಗೊಳ್ಳದಿರುವುದು ವಿಪರ್ಯಾಸ. ತಾಲೂಕಿನ ಜನ ನನಗೆ ಅಧಿಕಾರ ನೀಡದಿದ್ದರೂ, ಮಾಜಿ ಶಾಸಕನಾಗಿ ಅಂದಿನ ಸಿಎಂ ಬಿ.ಎಸ್. ಯಡಿಯೂರಪ್ಪ ಅವರಲ್ಲಿ ವಿನಂತಿಸಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದ್ದೆ. ಅಂದು ನಾನು ಆ ಕೆಲಸ ಮಾಡಿಸದಿದ್ದರೆ ಇಂದಿಗೂ ಈ ಯೋಜನೆ ಅನುಷ್ಠಾನಕ್ಕೆ ಬರುತ್ತಿರಲಿಲ್ಲ. ಗೆದ್ದ ಜನಪ್ರತಿನಿಧಿಗಳು ಈ ಯೋಜನೆಯ ಬೆನ್ನ ಬಿದ್ದು ಕೆಲಸ ಮಾಡಿಸಲಿಲ್ಲ. ಕಾಮಗಾರಿ ವಿಳಂಬದಿಂದ ವೆಚ್ಚ ಹೆಚ್ಚಾಗಿ ಗುತ್ತಿಗೆದಾರರು ಕೆಲಸ ಬಿಟ್ಟು ಹೋದರು. ಅಧಿಕಾರದಲ್ಲಿ ಇದ್ದವರು ಸರಿಯಾದ ಸಮಯಕ್ಕೆ ಸ್ಪಂದಿಸಿದ್ದರೆ ಈ ಸಮಸ್ಯೆ ಎದುರಾಗುತ್ತಿರಲಿಲ್ಲ," ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರೈತರಿಂದ ಡಿಪಿಆರ್ ಸಲ್ಲಿಕೆ ಸಿಎಂ ಬಳಿ ಮನವಿಯ ಭರವಸೆ:

ಈ ವೇಳೆ ಪ್ರತಿಭಟನಾನಿರತ ರೈತರು ಹೇಮಾವತಿ ಕ್ಯಾನಲ್‌ಗೆ 'ಕಟ್ ಆಂಡ್ ಕವರ್' ಕಾಮಗಾರಿ ಮಾಡಿಸಲು ಅನುದಾನ ಬಿಡುಗಡೆಗೊಳಿಸುವಂತೆ ತಯಾರಿಸಲಾಗಿದ್ದ ಡಿಪಿಆರ್ ಪ್ರತಿಯನ್ನು ಮಾಜಿ ಶಾಸಕ ಕೆ.ಎಸ್. ಕಿರಣ್ ಕುಮಾರ್ ಅವರಿಗೆ ಹಸ್ತಾಂತರಿಸಿದರು. ಮುಖ್ಯಮಂತ್ರಿಗಳು ಹಾಗೂ ಸಂಬಂಧಪಟ್ಟ ನೀರಾವರಿ ಸಚಿವರ ಬಳಿ ಚರ್ಚಿಸಿ ಯೋಜನೆ ಪೂರ್ಣಗೊಳಿಸಲು ಸಹಕರಿಸಬೇಕೆಂದು ರೈತರು ಮನವಿ ಮಾಡಿದರು.

ಇದಕ್ಕೆ ಸ್ಪಂದಿಸಿ ಮಾತನಾಡಿದ ಕಿರಣ್ ಕುಮಾರ್, "ಡಿ.ಕೆ. ಶಿವಕುಮಾರ್ ಅವರ ಬಳಿ ಈಗಾಗಲೇ ಒಂದು ಬಾರಿ ಕಾಮಗಾರಿಯ ಬಗ್ಗೆ ಚರ್ಚಿಸಿದ್ದು, ಕಾಲುವೆಯ ಕಟ್ ಆಂಡ್ ಕವರ್‌ಗೆ ಅನುದಾನ ಬಿಡುಗಡೆ ಮಾಡುವಂತೆ ವಿನಂತಿಸಿದ್ದೇನೆ. ಪ್ರಸ್ತುತ ನನಗೆ ಅಧಿಕಾರವಿಲ್ಲದಿದ್ದರೂ, ರೈತರು ನೀಡಿರುವ ಈ ಡಿಪಿಆರ್ ಆಧಾರದ ಮೇಲೆ ಸರ್ಕಾರದಿಂದ ಹಣ ಬಿಡುಗಡೆ ಮಾಡಿಸಿ ಯೋಜನೆ ಪೂರ್ಣಗೊಳಿಸಲು ಅತ್ಯಂತ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ," ಎಂದು ಅಭಯ ನೀಡಿದರು.

ಕಾಂಗ್ರೆಸ್ ನಾಯಕ ಮುರಳೀಧರ ಹಾಲಪ್ಪ ಬೆಂಬಲ:

ಕಾಂಗ್ರೆಸ್ ಹಿರಿಯ ಮುಖಂಡ ಮುರಳೀಧರ ಹಾಲಪ್ಪ ಮಾತನಾಡಿ, "ರೈತರ ಅಹೋರಾತ್ರಿ ಧರಣಿ ಅತ್ಯಂತ ನ್ಯಾಯಯುತವಾದದ್ದು. ಇದಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ. ಸರ್ಕಾರದಿಂದ ಆಗಬೇಕಾದ ಕೆಲಸಗಳನ್ನು ಮಾಡಿಸಿಕೊಡುವುದು ನಮ್ಮ ಜವಾಬ್ದಾರಿ. ಸಂಬಂಧಪಟ್ಟ ಅಧಿಕಾರಿಗಳ ಜೊತೆ ಈಗಾಗಲೇ ಚರ್ಚಿಸಿದ್ದು, ನಿಗದಿತ ಸಮಯದೊಳಗೆ ಕೆಲಸ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ," ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನೀರಾವರಿ ಹೋರಾಟ ಸಮಿತಿಯ ಅಧ್ಯಕ್ಷ ಮಧು ಶಾವಿಗೆಹಳ್ಳಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಚಂದ್ರಶೇಖರ್, ಪಿ.ಟಿ. ಚಿಕ್ಕಣ್ಣ ಸೇರಿದಂತೆ ನೂರಾರು ರೈತರು ಹಾಗೂ ಹೋರಾಟಗಾರರು ಉಪಸ್ಥಿತರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಗ್ರಾಮೀಣ ಅಂಚೆ ನೌಕರರಿಗೆ 8ನೇ ವೇತನ ಆಯೋಗ ಸೌಲಭ್ಯಕ್ಕೆ ಆಗ್ರಹ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಗ್ರಾಮೀಣ ಅಂಚೆ ನೌಕರರ ಸಮಸ್ಯೆ ಬಗೆಹರಿಸಬೇಕು, ಇವರನ್ನು 8ನೇ ವೇತನ ಆಯೋಗ ವ್ಯಾಪ್ತಿಗೆ ತರಬೇಕು ಎಂದು ತುಮಕೂರಿನಲ್ಲಿ ಅಖಿಲ ಭಾರತ ಗ್ರಾಮೀಣ ಅಂಚೆ ನೌಕರರ ಸಂಘದ ಮುಖಂಡರು ಸರ್ಕಾರವನ್ನು ಒತ್ತಾಯಿಸಿದರು.

ನಗರದಲ್ಲಿ ನಡೆದ ಸಂಘದ ತುಮಕೂರು ವಿಭಾಗದ 14ನೇ ದ್ವೈವಾರ್ಷಿಕ ಅಧಿವೇಶನದಲ್ಲಿ ಹಲವು ಮುಖಂಡರು ಗ್ರಾಮೀಣ ಅಂಚೆ ನೌಕರರ ಸಮಸ್ಯೆಗಳನ್ನು ಪ್ರಸ್ತಾಪಿಸಿ, ಸರ್ಕಾರದ ಗಮನ ಸೆಳೆಯುವ ತೀರ್ಮಾನ ಮಾಡಿದರು. ಕಾರ್ಯಕ್ರಮ ಉದ್ಘಾಟಿಸಿದ ಬೆಂಗಳೂರಿನ ಹಿರಿಯ ಕಾನೂನು ಸಲಹೆಗಾರರಾದ ಎಸ್.ಎಸ್. ಮಂಜುನಾಥ್ ಅವರು, ಗ್ರಾಮೀಣ ಅಂಚೆ ಸೇವಕರ 8ನೇ ವೇತನ ಆಯೋಗದ ಬೇಡಿಕೆ ಕುರಿತು ಪ್ರಸ್ತಾಪಿಸಿ ಎಲ್ಲಾ ನೌಕರರು ಸಂಘಟಿತರಾಗಿ ಸರ್ಕಾರದ ಮೇಲೆ ಒತ್ತಡ ತರಬೇಕು ಎಂದು ಹೇಳಿದರು.

ನಿವೃತ್ತ ಅಂಚೆ ಅಧೀಕ್ಷಕರಾದ ಬಿ.ಎಂ.ಶಂಕರಪ್ಪ, ಪೋಸ್ಟ್ ಮ್ಯಾನ್ ಮತ್ತು ಎಂಟಿಎಸ್ ಸಂಘದ ವಲಯ ಕಾರ್ಯದರ್ಶಿ ಕೆ.ಎಸ್.ರುದ್ರೇಶ್ ಅವರು ಜಿ.ಡಿ.ಎಸ್. ನೌಕರರ ಸಮಸ್ಯೆಗಳ ಕುರಿತು ಮಾತನಾಡಿದರು.

ಎಐಜಿಡಿಎಸ್‌ಯು ಸಂಘದ ವಲಯ ಕಾರ್ಯದರ್ಶಿ ಎಚ್.ಬಿ. ರಾಚ್‌ಕುಮಾರ್ ಅವರು ಮಾತನಾಡಿ, ಅಂಚೆ ನೌಕರರು ಮತ್ತು ವಿಭಾಗದ ಸಿಬ್ಬಂದಿ ವರ್ಗವು ಟಾರ್ಗೆಟ್ ತಲುಪದಿದ್ದರೆ ದೌರ್ಜನ್ಯ ಎಸಗುವುದು ಹಾಗೂ ಜಿ.ಡಿ.ಎಸ್. ನೌಕರರಿಗೆ ರಜಾ ನಿಲ್ಲುತ್ತಿರುವ ಸೇವಾ ಲಕ್ಷಣಗಳನ್ನು ತಲುಪದಿದ್ದರೆ ದೌರ್ಜನ್ಯ ಎಸಗುವುದು ಹಾಗೂ ಜಿ.ಡಿ.ಎಸ್. ನೌಕರರಿಗೆ ರಜಾ ನಿಲ್ಲುತ್ತಿರುವ ಸೇವಾಲಕ್ಷ್ಯಗಳನ್ನು ಮುಂದುವರಿಸುತ್ತಿರುವ ಬಗ್ಗೆ ಬೇಸರ ವ್ಯಕ್ತಪಡಿಸಿ, ಇಂತಹ ಶೋಷಣೆ ದೇಶದಲ್ಲಿ ಎಲ್ಲೂ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ತುಮಕೂರು ವಿಭಾಗದ ಅಧ್ಯಕ್ಷರಾದ ಶಾಂತಯ್ಯ ಅಧ್ಯಕ್ಷತೆ ವಹಿಸಿದ್ದರು. ವಿಭಾಗದ ಕಾರ್ಯದರ್ಶಿ ಎಸ್.ಪಿ.ಕುಮಾರಸ್ವಾಮಿ, ಎಐಪಿಇಯು ಗ್ರೂಪ್ ಸಿ ನೌಕರರ ಸಂಘದ ಅಧ್ಯಕ್ಷ ನರಸಿಂಹಯ್ಯ, ವಿಭಾಗೀಯ ಕಾರ್ಯದರ್ಶಿ ನರಸಿಂಹರಾಜು ಎನ್, ವಿಭಾಗೀಯ ಖಜಾಂಚಿ ಮಹೇಶ್ ಎಂ.ಸಿ, ಎಐಪಿಇಯು ಗ್ರೂಪ್ ಸಿ ಸಂಘದ ಟಿ.ಪಿ. ಹರಿಪ್ರಸಾದ್, ಎಂಟಿಎಸ್ ವಿಭಾಗೀಯ ಕಾರ್ಯದರ್ಶಿ ಕೆ.ಸಿ. ಮಂಜುನಾಥ, ವಿಭಾಗೀಯ ಅಧ್ಯಕ್ಷ ಪ್ರಕಾಶ್ ಎಂ ಡಿ, ವಿಭಾಗೀಯ ಖಜಾಂಚಿ ಶಿವರಾಮು ಡಿ ಹಾಗೂ ತುಮಕೂರು ವಿಭಾಗದ ಎಐಜಿಡಿಎಸ್‌ಯು ಸಂಘದ ಅಧ್ಯಕ್ಷ ಟಿ. ಆರ್.ಬೈಲಪ್ಪ, ಮಾಜಿ ಕಾರ್ಯದರ್ಶಿ ಎಸ್.ಎಸ್. ವಿಶ್ವೇಶ್ವರಯ್ಯ ಮೊದಲಾದವರು ಭಾಗವಹಿಸಿದ್ದರು.

ಎಸ್ಸಿ,ಎಸ್ಟಿ ನೌಕರರು ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಒಗ್ಗೂಡುವ ಅಗತ್ಯವಿದೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ರಾಜ್ಯದಲ್ಲಿ ಎಸ್ಸಿ, ಎಸ್ಟಿ ಸರಕಾರಿ ನೌಕರರ ಸಮನ್ವಯ ಸಮಿತಿಯ ಹೋರಾಟದ ಫಲವಾಗಿ ಇಂದು ಬಡ್ತಿ ಮೀಸಲಾತಿ ಜಾರಿಯಲ್ಲಿದೆ .ಹಾಗೆಯೇ ಸಂವಿಧಾನದ ಅಡಿಯಲ್ಲಿ ಅವಕಾಶಗಳನ್ನು ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಎಸ್ಸಿ ಎಸ್ಟಿ ನೌಕರರು ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಒಗ್ಗೂಡುವ ಅಗತ್ಯವಿದೆ. ಈ ನಿಟ್ಟಿನಲ್ಲಿ 2026ರ ಆಗಸ್ಟ್ 28 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯುವ ಕರ್ನಾಟಕ ರಾಜ್ಯ ಸರಕಾರಿ ಎಸ್ಸಿ, ಎಸ್ಟಿ ನೌಕರರ 6ನೇ ರಾಜ್ಯ ಮಟ್ಟದ ಐಕ್ಯತಾ ಸಮಾವೇಶದಲ್ಲಿ ಎಲ್ಲ ನೌಕರರು ಪಾಲ್ಗೊಳ್ಳುವಂತೆ ಸಮಿತಿ ಅಧ್ಯಕ್ಷರಾದ ಡಿ.ಶಿವಶಂಕರ್ ಮನವಿ ಮಾಡಿದ್ದಾರೆ.

ನಗರದ ಖಾಸಗಿ ಹೊಟೇಲ್‌ನಲ್ಲಿ ನಡೆದ ಕರ್ನಾಟಕ ರಾಜ್ಯ ಸರಕಾರಿ ಎಸ್ಸಿ, ಎಸ್ಟಿ ಸರಕಾರಿ ನೌಕರರ ಸಮನ್ವಯ ಸಮಿತಿಯ ವತಿಯಿಂದ ಹಮ್ಮಿಕೊಂಡಿರುವ 6ನೇ ಐಕ್ಯತಾ ಸಮಾವೇಶದ ಪೂರ್ವಭಾವಿ ಸಭೆಯನ್ನು ಉದ್ದೇಶಿಸಿ ಮಾತನಾಡುತಿದ್ದ ಅವರು, ಇಡೀ ದೇಶದಲ್ಲಿ ಬಡ್ತಿ ಮೀಸಲಾತಿಗೆ ಸಂಬಂಧಿಸಿದಂತೆ ನಡೆಸಿದ ಹೋರಾಟ ಐತಿಹಾಸಿಕ. ಅದರ ಫಲವಾಗಿ ಇಡೀ ದೇಶದಲ್ಲಿ ಎಲ್ಲಿಯೂ ಇಲ್ಲದ ಬಡ್ತಿ ಮೀಸಲಾತಿ ಕರ್ನಾಟಕದಲ್ಲಿ ಇದೆ.ಇದು ಸಮನ್ವಯ ಸಮಿತಿಯ ಮೈಲಿಗಲ್ಲು ಎಂದರು.

ಸಂವಿಧಾನ ಬಂದು 78 ವರ್ಷ ಕಳೆದರೂ ಇಂದಿಗೂ ಈ ವರ್ಗದ ನೌಕರರು ಒಳ್ಳೆಯ ಬಟ್ಟೆ ತೊಟ್ಟರೆ, ಕಾರಿನಲ್ಲಿ ಓಡಾಡಿದರೆ ಸಹಿಸಲಾರದ ಮನಸ್ಸುಗಳಿವೆ. ಅವುಗಳನ್ನು ಮೆಟ್ಟಿ ನಿಲ್ಲುವ ಸಲುವಾಗಿ ನಾವು ಮತ್ತಷ್ಟು ಒಗ್ಗೂಡುವ ಅಗತ್ಯವಿದೆ. ನಮ್ಮಗೋರಿಯ ಮೇಲೆ ಬೇರೆಯವರು ಬಂದು ಮನೆ ಕಟ್ಟುವ ಮೊದಲು, ನಮ್ಮಗೋರಿಯ ಮೇಲೆ ನಾವೇ ಮನೆ ಕಟ್ಟುವಂತಹ ಸ್ವಾಭಿಮಾನವನ್ನು ನಾವು ಬೆಳೆಸಿಕೊಳ್ಳಬೇಕಾಗಿದೆ.ಹಾಗಾಗಿಯೇ ಆಗಸ್ಟ್ 28 ರಂದು ನಡೆಯುವ ಈ ಐತಿಹಾಸಿಕ ಐಕ್ಯತಾ ಸಮಾವೇಶದಲ್ಲಿ ಎಲ್ಲಾ ನೌಕರರು ಪಾಲ್ಗೊಳ್ಳುವ ಮೂಲಕ ಇರುವ ಅವಕಾಶವನ್ನು ಬಳಸಿಕೊಳ್ಳುವತ್ತಾ ನಾವೆಲ್ಲರೂ ಮತ್ತಷ್ಟು ಗಟ್ಟಿಯಾಗಿ ನಿಲ್ಲಬೇಕಾಗಿದೆ ಎಂದು ಡಿ.ಶಿವಶಂಕರ್ ತಿಳಿಸಿದರು.

ಕರ್ನಾಟಕರಾಜ್ಯ ಸರಕಾರಿ ಎಸ್ಸಿ,ಎಸ್ಟಿ ನೌಕರರ ಸಮನ್ವಯ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ವಿಜಯಕುಮಾರ್. ಎಸ್ಅವರು ಮಾತನಾಡಿ, ಆಗಸ್ಟ್ 28 ರಂದು ನಡೆಯುವ ಸಮಿತಿಯ 6 ನೇ ಐಕ್ಯತಾ ಸಮಾವೇಶವನ್ನು ಮುಖ್ಯಮಂತ್ರಿ ಡಿ.ಕೆ . ಶಿವಕುಮಾರ್ ಉದ್ಘಾಟಿಸಲಿದ್ದು, ಕಂದಾಯ ಮಂತ್ರಿ ಡಾ.ಜಿ.ಪರಮೇಶ್ವರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಲೋಕೋಪಯೋಗಿ ಸಚಿವರಾದ ಸತೀಶ್ ಜಾರಕಿಹೊಳಿ,ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್.ಮುನಿಯಪ್ಪ, ಗೃಹ ಸಚಿವರಾದ ಪ್ರಿಯಾಂಕಖರ್ಗೆ ,ಸಚಿವ ಸಂಪುಟದಎಲ್ಲಾ ಸಚಿವರು,ಶಾಸಕರುಗಳು ಭಾಗವಹಿಸಲಿದ್ದಾರೆ.ಸಮಾವೇಶದಲ್ಲಿ ಸಂವಿಧಾನದ ಆಶಯಗಳು:ಎಸ್ಸಿ,ಎಸ್ಟಿ ನೌಕರರು ಮತ್ತು ಅಧಿಕಾರಿಗಳ ಜವಾಬ್ದಾರಿ ಎಂಬ ವಿಷಯಕುರಿತು ವಿಚಾರ ಸಂಕಿರಣ ಸಹ ಆಯೋಜಿಸಲಾಗಿದೆ. ಸಮಾವೇಶದ ಅಂಗವಾಗಿ ಸ್ಮರಣ ಸಂಚಿಕೆಯನ್ನು ಸಹ ಹೊರತರಲಾಗುತ್ತಿದೆ. ಹಾಗಾಗಿ ಎಲ್ಲಾ ಪರಿಶಿಷ್ಟ ಜಾತಿ ಮತ್ತು ವರ್ಗಗಳ ನೌಕರರುಆಗಸ್ಟ್ 28ರ 6ನೇ ಐಕ್ಯತಾ ಸಮಾವೇಶದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

ಸಭೆಯಲ್ಲಿ ಕರ್ನಾಟಕ ರಾಜ್ಯ ಸರಕಾರಿ ಎಸ್ಸಿ, ಎಸ್ಟಿ ನೌಕರರ ಸಮನ್ವಯ ಸಮಿತಿ ರಾಜ್ಯಕೋಶಾಧ್ಯಕ್ಷರಾದ ಸತ್ಯನಾರಾಯಣ.ಎಂ. ಎಲ್, ಉಪಾಧ್ಯಕ್ಷರಾದ ಆರ್.ಮೋಹನ್, ಕೆಂಪಸಿದ್ದಯ್ಯ, ತುಮಕೂರು ಜಿಲ್ಲಾಧ್ಯಕ್ಷರಾದ ನರಸಿಂಹಮೂರ್ತಿ, ಪ್ರಧಾನ ಕಾರ್ಯದರ್ಶಿ ನಾಗರಾಜು,ಹನುಮಂತರಾಜು, ಕೋಟೆಕಲ್ಲಯ್ಯ, ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ರೈತರ ತೋಟಗಾರಿಕೆ ಬೆಳೆಯಲ್ಲಿ ವಿನಾಶಕಾರಿ ರೋಗಗಳನ್ನು ಪತ್ತೆ ಹಚ್ಚಲು ಶಿಲೀಂಧ್ರನಾಶಕ "ಕ್ಸಿವಾನಾ" ಸ್ಮಾರ್ಟ್ ಬಿಡುಗಡೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ತುಪ್ಪಟ ಬೂಜು ರೋಗ ಮತ್ತು ತಡವಾದ ಅಂಗಮಾರಿಯಂತಹ ವಿನಾಶಕಾರಿ ರೋಗಗಳಿಂದ ತೋಟಗಾರಿಕೆ ಬೆಳೆಗಳನ್ನು ರಕ್ಷಿಸುವ ಉದ್ದೇಶದಿಂದ ವಿನ್ಯಾಸಗೊಳಿಸಲಾದ ಅತ್ಯಾಧುನಿಕ ಸಂಶೋಧನೆಯಾಗಿ "ಕ್ಸಿವಾನಾ ಟಿ.ಎಂ"(óXivana TM) ಸ್ಮಾರ್ಟ್ ಶಿಲೀಂಧ್ರನಾಶಕವನ್ನು ಬಿಡುಗಡೆ ಮಾಡಿರುವುದಾಗಿ ಬಾಯರ್ (Bayer) ಇಂದು ಘೋಷಿಸಿದೆ. ಎಫ್.ಆರ್.ಎ.ಸಿ ಗುಂಪು 49ರ ಅಡಿಯ ಸಕ್ರಿಯ ಘಟಕಾಂಶದಿಂದ ಶಕ್ತವಾದ 'ಝಿವಾನಾ ಟಿ.ಎಂ.' ಸ್ಮಾರ್ಟ್, ದ್ರಾಕ್ಷಿ, ಸೋರೆಕಾಯಿ ಕುಟುಂಬದ ಬಳ್ಳಿಗಳು, ಆಲೂಗಡ್ಡೆ, ಮತ್ತು ಟೊಮ್ಯಾಟೋ ಬೆಳೆಗಳಲ್ಲಿ ಉನ್ನತ ದರ್ಜೆಯ ರೋಗ ನಿಯಂತ್ರಣವನ್ನು ಒದಗಿಸುತ್ತದೆ, ಈ ಮೂಲಕ ಬೆಳೆ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಉತ್ಪಾದಕತೆಯನ್ನು ಸುಧಾರಿಸಲು ಮತ್ತು ಗರಿಷ್ಠ ಆದಾಯಗಳಿಸಲು ರೈತರಿಗೆ ಸಹಾಯ ಮಾಡುತ್ತದೆ ಇಂಡಿಯಾ ಕ್ರಾಪ್ ಸೈನ್ಸ್ ವಿಭಾಗದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಮೋಹನ್ ಬಾಬುರವರು ತಿಳಿಸಿದರು.

ನಗರದ ತುಮಕೂರಿನ ರೈತರ ತೋಟಗಾರಿಕೆ ಬೆಳೆಗಳಲ್ಲಿ ವಿನಾಶಕಾರಿ ರೋಗಗಳನ್ನು ಪತ್ತೆ ಹಚ್ಚಲು ಶಿಲೀಂಧ್ರನಾಶಕ "ಕ್ಸಿವಾನಾ ಟಿ.ಎಂ" (óXivana TM) ಸ್ಮಾರ್ಟ್ ಬಿಡುಗಡೆ ಮಾಡಿದ ಬಾಯರ್‌ನ್ನು ಆ.3 ರಂದು ಸೋಮವಾರ ಬೆಳಿಗ್ಗೆ 11 ಗಂಟೆಗೆ ಬಿಡುಗಡೆಯನ್ನು ಮಾಡಿದರು. ಸಿ.ಇ.ಓ ಮೋಹನ್ ಬಾಬುರವರು ಮಾತನಾಡುತ್ತಾ ತೋಟಗಾರಿಕೆ ಬೆಳೆಗಳನ್ನು ಬಾಧಿಸುವ ರೋಗಗಳಲ್ಲಿ ತುಪ್ಪಳಿನ ರೋಗ ಮತ್ತು ಅಂಗಮಾರಿ ಅತ್ಯಂತ ಮಾರಕವಾಗಿರುತ್ತವೆ, ಕೆಲವೊಮ್ಮೆ ಬೆಳೆ ರಕ್ಷಣೆಗಾಗಿ ರೈತರು ಖರ್ಚು ಮಾಡುವ ಅರ್ಧಾಂಶ ಹಣವನ್ನು ಇವೆರಡು ರೋಗಗಳೇ ಕಬಳಿಸುತ್ತವೆ. ಹವಾಮಾನ ಮಾದರಿಗಳಲ್ಲಿ ಬದಲಾವಣೆ ಮತ್ತು ಸುದೀರ್ಘ ಅವಧಿಯ ತನಕ ಉಳಿಯುವ ಆರ್ದ್ರತೆಯಿಂದಾಗಿ ರೋಗಗಳ ಒತ್ತಡವು ತೀವ್ರಗೊಳ್ಳುತ್ತದೆ. ಹೀಗಾಗಿ, ಸುಸ್ಥಿರ ಕೃಷಿ ಪದ್ಧತಿಗಳನ್ನು ಅನುಸರಿಸುವಂತೆ ಬೆಳೆಗಾರರನ್ನು ಬೆಂಬಲಿಸುವ ಸಂದರ್ಭದಲ್ಲಿ, ವಿಶ್ವಾಸಾರ್ಹ ಮತ್ತು ದೀರ್ಘಕಾಲೀನ ರಕ್ಷಣೆಯನ್ನು ಒದಗಿಸುವ ನವೀನ ಪರಿಹಾರಗಳ ಅಗತ್ಯವಿರುತ್ತದೆ ಎಂದು ಅರ್ಥಪೂರ್ಣವಾಗಿ ವಿವರಿಸಿದರು.

ಕಾರ್ಯಕ್ರಮದಲ್ಲಿ ಮೋಹನ್ ಬಾಬುರವರು ಮಾತನಾಡುತ್ತಾ "ಕ್ಸಿವಾನಾ ಟಿ.ಎಂ" (óXivana TM) ಸ್ಮಾರ್ಟ್ ಈ ಸವಾಲನ್ನು ಆಧುನಿಕ ವಿಧಾನದಲ್ಲಿ ಪರಿಹರಿಸುತ್ತದೆ. ಇದು ಓಮೈಸೀಟ್ ರೋಗಗಳ ವಿರುದ್ಧ ಅತಿ ಹೆಚ್ಚು ಪರಿಣಾಮಕಾರಿಯಾಗಿದೆ. ಮಳೆಗಾಲದಲ್ಲೂ ಸರಾಸರಿ 7 ರಿಂದ 14 ದಿನಗಳ ವರೆಗೆ ರಕ್ಷಣೆ ನೀಡುವ ಈ ದ್ರಾವಣವು ಅತ್ಯುತ್ತಮ ಪರಿಣಾಮಕಾರಿತ್ವವನ್ನು ಖಚಿತಪಡಿಸುತ್ತದೆ. ಮಳೆ-ನಿರೋಧಕ ಗುಣಲಕ್ಷಣಗಳು ಮತ್ತು ಹಾಲಿ ಇರುವ ಸಸ್ಯಗಳಿಗೆ ಹಾಗೂ ಹೊಸದಾಗಿ ಚಿಗುರುತ್ತಿರುವ ಸಸ್ಯಗಳಿಗೂ ರಕ್ಷಣೆ ನೀಡುವ ಈ ದ್ರಾವಣದ ಸಾಮರ್ಥ್ಯವು ರೈತರು ಇಡೀ ಬೆಳೆ ಆವರ್ತನದ ಉದ್ದಕ್ಕೂ ರೋಗದ ಒತ್ತಡವನ್ನು ಸಮರ್ಥವಾಗಿ ನಿರ್ವಹಿಸಲು ಅನುವು ಮಾಡಿಕೊಡುತ್ತದೆ. "ಭಾರತದ ಪೌಷ್ಟಿಕಾಂಶ ಭದ್ರತೆ ಮತ್ತು ರೈತರ ಸಮೃದ್ಧಿಗೆ ತೋಟಗಾರಿಕೆ ಬೆಳೆಗಳ ಕೊಡುಗೆ ಪ್ರಧಾನವಾಗಿದೆ. "ಕ್ಸಿವಾನಾ ಟಿ.ಎಂ" (ಘಿತಚಿಟಿಚಿ ಖಿಒ) ಸ್ಮಾರ್ಟ್ ಮೂಲಕ, ತೋಟಗಾರಿಕೆ ಬೆಳೆಗಾರರು ಸಂಕೀರ್ಣ ರೋಗ ಒತ್ತಡಗಳನ್ನು ಸುಲಭವಾಗಿ ನಿರ್ವಹಿಸಲು, ಬೆಳೆಯ ಗುಣಮಟ್ಟವನ್ನು ರಕ್ಷಿಸಲು ಮತ್ತು ಹೆಚ್ಚು ಸ್ಥಿತಿಸ್ಥಾಪಕ, ಸುಸ್ಥಿರ ಆಹಾರ ವ್ಯವಸ್ಥೆಯನ್ನು ನಿರ್ಮಿಸಲು ನೆರವಾಗಬಲ್ಲ ವಿಜ್ಞಾನ-ಚಾಲಿತ ಹೊಸ ಪರಿಹಾರಗಳನ್ನು ಬಾಯರ್ ಸಂಸ್ಥೆಯು ನೀಡುತ್ತಿದೆ" ಎಂದರು.

"ಕ್ಸಿವಾನಾ ಟಿ.ಎಂ" (óXivana TM) ಸ್ಮಾರ್ಟ್ ಉತ್ಪನ್ನವು ತೋಟಗಾರಿಕೆ ಬೆಳೆಗಳನ್ನು ಪ್ರಮುಖವಾಗಿ ಬೆಳೆಯುವ ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಛತ್ತೀಸ್‌ಗಢ, ಮಧ್ಯಪ್ರದೇಶ, ಗುಜರಾತ್, ರಾಜಸ್ಥಾನ, ಅಸ್ಸಾಂ, ಆಂಧ್ರಪ್ರದೇಶ ಮತ್ತು ಪಂಜಾಬ್ ರಾಜ್ಯಗಳಲ್ಲಿ ಲಭ್ಯವಿರುತ್ತದೆ. "ಕ್ಸಿವಾನಾ ಟಿ.ಎಂ"ಸ್ಮಾರ್ಟ್ ಉತ್ಪನ್ನದ ಬಿಡುಗಡೆಯು, ಸ್ಥಿತಿಸ್ಥಾಪಕತ್ವ, ಉತ್ಪಾದಕತೆ, ಮತ್ತು ಸುಸ್ಥಿರ ಫಲಿತಾಂಶಗಳನ್ನು ಸುಧಾರಿಸುವ ನವೀನ ಬೆಳೆ ಸಂರಕ್ಷಣಾ ದ್ರಾವಣಗಳನ್ನು ರೈತರಿಗೆ ಒದಗಿಸುವ ನಿಟ್ಟಿನಲ್ಲಿ ಬಾಯರ್‌ನ ಬದ್ಧತೆಯನ್ನು ಇನ್ನಷ್ಟು ಬಲಪಡಿಸಿದೆ ಎಂದರು.

ಸ್ವಾತಂತ್ರ್ಯ ಬಂದು 79 ವರ್ಷಗಳು ಕಳೆದರೂ ನಮ್ಮ ಗ್ರಾಮಕ್ಕೆ ಸರ್ಕಾರಿ ಬಸ್ ಬಂದಿಲ್ಲ

ಸೂರ್ಯಪ್ರಗತಿನ್ಯೂಸ್.ಕಾಂ



ಮಧುಗಿರಿ:- ತಾಲ್ಲೂಕಿನ ಕೊಡಿಗೇನಹಳ್ಳಿ ಶಾಲಾ-ಕಾಲೇಜುಗಳಿಗೆ ಹಾಗೂ ದೂರದ ಗ್ರಾಮಗಳಿಗೆ ಪ್ರತಿದಿನ 3-4 ಕಿಲೋ ಮೀಟರ್ ನಡೆದುಕೊಂಡು ಹೋಗಿ ಬರುತ್ತಿದ್ದ ವಿದ್ಯಾರ್ಥಿಗಳು ಹಾಗೂ ಜನರಿಗೆ ಸೋಮವಾರ ತಮ್ಮ ಗ್ರಾಮಕ್ಕೆ ಮೊದಲ ಬಾರಿ ಕೆ.ಎಸ್. ಆರ್.ಟಿ.ಸಿ. ಬಸ್ ಬಂದಿದ್ದು ಕಂಡು ಸಂಭ್ರಮಿಸಿದರು.

ಸ್ವಾತಂತ್ರ್ಯ ಬಂದು 79 ವರ್ಷಗಳು ಕಳೆದರೂ ಇದು ಮರೆಗೂ ಗಡಿ ಭಾಗದಲ್ಲಿರುವ ನಮ್ಮ ಗ್ರಾಮಕ್ಕೆ ಯಾವುದೇ ಒಂದು ಸರ್ಕಾರಿ ಬಸ್ ಕೂಡ ಬಂದಿರಲಿಲ್ಲ. ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳಿಗೆ ತೆರಳಬೇಕಾದರೆ ಹಾಗೂ ಜನರು ಎಲ್ಲಿಗಾದರೂ ಹೋಗಿ ಬರಬೇಕಾಗಿದ್ದರೆ 3-4 ಕಿಲೋ ಮೀಟರ್ ದೂರದ ಮುದ್ದೇನಹಳ್ಳಿ ಗೇಟ್ ಅಥವಾ ಕಸಿನಾಯಕನಹಳ್ಳಿವರೆಗೆ ನಡೆಯಬೇಕಾಗಿತ್ತು. ಸಾಮಾನ್ಯ ದಿನಗಳಲ್ಲಿ ಇವರು ಹೇಗೋ ನಡೆದು ಹೋಗುತ್ತಿತ್ತು. ಆದರೆ ಬೇಸಿಗೆಕಾಲ ಹಾಗೂ ಮಳೆಗಾಲದಲ್ಲಿ ಇವರುಗಳ ಕಷ್ಟ ಹೇಳ ತೀರದಾಗಿತ್ತು. ಹಾಗಾಗಿ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಜೊತೆಗೂಡಿ ಈಚೆಗೆ ಕಸಿನಾಯಕನಹಳ್ಳಿ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಕೆ.ಎನ್. ರಾಜಣ್ಣನವರ ಗಮನಕ್ಕೆ ತಂದಾಗ ಅವರು ನಮ್ಮ ಮನವಿಗೆ ಸ್ಪಂದಿಸಿ ಬಸ್ ಸೌಕರ್ಯ ಕಲ್ಪಿಸಿದ್ದಾರೆ ಅವರಿಗೆ ನಮ್ಮ ಗ್ರಾಮಸ್ಥರ ಪರವಾಗಿ ಧನ್ಯವಾದಗಳು ಎಂದು ಮುಖಂಡ ನಾರಾಯಣಸ್ವಾಮಿ ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ವಿ.ಟಿ. ಹನುಮಂತರಾಯಪ್ಪ, ಬಾಲಾಜಿ, ಮುದ್ದೇಗೌಡ, ನಾಗರಾಜಗೌಡ, ವಾಟರ್ ಮೆನ್ ರಾಮಾಂಜಿ, ನರಸಿಂಹಮೂರ್ತಿ, ವಿ.ಎಚ್. ಬಾಲು, ಹನುಮಂತು, ಆವಲಪ್ಪ, ಕಸಿನಾಯಕನಹಳ್ಳಿಯ ಸುನೀಲ್, ಕೆ.ಎಮ್. ರಾಮಾಂಜಿ, ಶಿವಪ್ಪ, ಶ್ರೀನಿವಾಸ್, ಗೋವಿಂದರಾಜು, ಅನಂತಮ್ಮ, ಲಕ್ಷ್ಮಿದೇವಮ್ಮ, ಶಾಂತಮ್ಮ, ಗಂಗಮ್ಮ, ಡಿಸಿಸಿ ಬ್ಯಾಂಕ್ ಸೂಪರ್ ವೈಸರ್ ರಾಮಕೃಷ್ಣಪ್ಪ, ನೌಕರರಾದ ಗುಟ್ಟೆ ರಂಗನಾಥ್, ಇಮ್ರಾನ್ ಹಾಗೂ ವಿದ್ಯಾರ್ಥಿಗಳು ಇದ್ದರು. ಆಂಧ್ರಪ್ರದೇಶದ ಹಿಂದೂಪುರಕ್ಕೆ ಕೇವಲ 5 ಕಿಲೋ ಮೀಟರ್ ಅಂತರದಲ್ಲಿರುವ ಜಲತಿಮ್ಮನಹಳ್ಳಿಯಿಂದ ಬೆಳಿಗ್ಗೆ 7.45 ಕ್ಕೆ ಬಿಟ್ಟು ಕಸಿನಾಯಕನಹಳ್ಳಿ, ಮೆಂಗಳಮ್ಮನಹಳ್ಳಿ, ಮುದ್ದೇನಹಳ್ಳಿ ಗೇಟ್ , ತೆರಿಯೂರು, ಮುತ್ಯಾಲಮ್ಮನಹಳ್ಳಿ, ಗುಟ್ಟೆ ಹಾಗೂ ಕೊಡಿಗೇನಹಳ್ಳಿ ಮಾರ್ಗವಾಗಿ ಮಧುಗಿರಿಗೆ ತಲುಪಿ ಸಂಜೆ ಮಧುಗಿರಿ 4.15 ಕ್ಕೆ ಬಿಟ್ಟು ಜಲತಿಮ್ಮನಹಳ್ಳಿಗೆ 5.15 ಕ್ಕೆ ವಾಪಸ್ಸಾಗುತ್ತದೆ ಎಂದು ಬಾಲು ವಿವರಿಸಿದರು

"ಡಿಜಿಟಲ್ ಮಾಧ್ಯಮ ಬಳಸುವಾಗ ಹೆಣ್ಣುಮಕ್ಕಳು ಎಚ್ಚರವಹಿಸಿ"

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಇಂದಿನ ಡಿಜಿಟಲ್ ಮಾಧ್ಯಮಗಳ ಬಳಕೆ ಮಾಡುವಾಗ ಹೆಣ್ಣುಮಕ್ಕಳು ಬಹಳ ಎಚ್ಚರಿಕೆಯಿಂದಿರಬೇಕು ಎಂದು ವಿದ್ಯೋದಯ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಮಾಳವಿಕ ತಿಳಿಸಿದರು.

ನಗರದ ಶ್ರೀ ಸಿದ್ಧಾರ್ಥ ದಂತ ವೈದ್ಯಕೀಯ ಕಾಲೇಜಿನ ಸವ್ಯಸಾಚಿ ಸಭಾಂಗಣದಲ್ಲಿ ಲಿಂಗ ಸಂವೇದನೆ ಮತ್ತು ಸಮಾನತೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಮಹಿಳಾ ಸುರಕ್ಷತೆ ಹಾಗೂ ಡಿಜಿಟಲ್ ಜಾಗೃತಿ ಮತ್ತು ಸಮಾನ ಅವಕಾಶಗಳಿಂದ ಉತ್ತಮ ಸಮಾಜ ನಿರ್ಮಾಣದ ಅಗತ್ಯತೆಯ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಮುಖ ಅಂಶವಾದ ಸೈಬರ್ ಬುಲ್ಲಿಂಗ್ ಕುರಿತು ವಿಶೇಷ ಉಪನ್ಯಾಸ ನಡೆಯಿತು. ಸಾಮಾಜಿಕ ಜಾಲತಾಣಗಳು ಮತ್ತು ಡಿಜಿಟಲ್ ವೇದಿಕೆಗಳಲ್ಲಿ ನಡೆಯುವ ಕಿರುಕುಳ ಅವಹೇಳನ, ನಕಲಿ ಖಾತೆಗಳ ದುರುಪಯೋಗ, ವೈಯಕ್ತಿಕ ಮಾಹಿತಿಗಳ ದುರ್ಬಳಕೆ ಬಗ್ಗೆ ಮಾಹಿತಿ ನೀಡಲಾಯಿತು. ಇಂತಹ ಸಂದರ್ಭಗಳಲ್ಲಿ ಸಾಕ್ಷ್ಯಗಳನ್ನು ಸಂರಕ್ಷಿಸುವುದು ಮತ್ತು ಸಂಬಂಧಿತ ಅಧಿಕಾರಿಗಳಿಗೆ ಹೇಗೆ ದೂರು ಸಲ್ಲಿಸಬೇಕು ಎಂಬುದರ ಬಗ್ಗೆ ವಿವರಿಸಿದರು.

ಆಂತರಿಕ ದೂರು ಸಮಿತಿಯ ಮುಖ್ಯಸ್ಥರಾದ ಡಾ. ಲಕ್ಷ್ಮೀದೇವಿ ಬಿ.ಎಲ್ ಅವರು ಸಾಮಾಜಿಕ ಜಾಲತಾಣಗಳನ್ನು ಸುರಕ್ಷಿವಾಗಿ ಜವಾಬ್ದಾರಿಯುತವಾಗಿ ಉಪಯೋಗಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಪ್ರವೀಣ್ ಕುಡುವಾ, ಸಮಿತಿಯ ಸದಸ್ಯರಾದ ಡಾ.ಜ್ಯೋತಿಗಣೇಶ್ , ಡಾ. ಚಂಪಾ.ಸಿ, ಡಾ.ಚೇತನ್ ಕೆ. ಡಾ.ಅಶ್ವಿನಿ.ಕೆ ಡಾ.ನಿತಾ ಡಿ, ಡಾ.ಲಕ್ಷ್ಮೀ ಅಶ್ವಿನ್ ಕುಮಾರ್ ಹರ್ಷ ವೈ.ಎಸ್ ಹಾಗೂ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಅಸ್ತಮಾ ಮತ್ತು ಅಲರ್ಜಿ ಸಮಸ್ಯೆಗಳಿಗೆ ಸೂಕ್ತ ಚಿಕಿತ್ಸೆ ಅಗತ್ಯ

ಸೂರ್ಯಪ್ರಗತಿನ್ಯೂಸ್.ಕಾಂ





ತುಮಕೂರು: ಅಸ್ತಮಾ ಮತ್ತು ಅಲರ್ಜಿ ಎಂಬುದು ಇತ್ತೀಚಿನ ದಿನಗಳಲ್ಲಿ ಕಾಡುತ್ತಿರುವ ಸಾಮಾನ್ಯ ಆರೋಗ್ಯ ಸಮಸ್ಯೆಯಾಗಿದೆ. ಇತ್ತೀಚಿನ ದಿನಗಳಲ್ಲಿ ಆಹಾರದ ಸಮಸ್ಯೆಯಿಂದ ಅಲರ್ಜಿಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಕೇವಲ ಆಹಾರ ಮಾತ್ರವಲ್ಲದೆ ಬೇರೆ-ಬೇರೆ ಕಾರಣಗಳಿಂದಲೂ ಇಂತಹ ಸಮಸ್ಯೆ ಬರಲಿವೆ. ಮುಖ್ಯವಾಗಿ ವಾತಾವರಣದಲ್ಲಿನ ಬದಲಾವಣೆಯೂ ಸಹ ಅಲರ್ಜಿಗೆ ಕಾರಣವಾಗಲಿದೆ. ಹೀಗಾಗಿ ಇದರ ಬಗ್ಗೆ ವೈದ್ಯಕೀಯ ವಿದ್ಯಾರ್ಥಿಗಳು ನಿರಂತರ ಸಂಶೋಧನೆ ಮತ್ತು ಕಲಿಕೆಯ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂದು ಗಾಣದಾಳ್ ಆಸ್ಪತ್ರೆಯ ನಿರ್ದೇಶಕ ಹಾಗೂ ಇ.ಎನ್.ಟಿ ತಜ್ಞರಾದ ಡಾ.ಮುನೀಶ್ವರ ಜಿ.ಬಿ.ರವರು ತಿಳಿಸಿದರು.

ನಗರದ ಎಸ್.ಎಸ್.ಪುರಂ 3ನೇ ಕ್ರಾಸ್‌ನ ಗಾಣದಾಳ್ ಕಿವಿ, ಮೂಗು, ಗಂಟಲು ಮತ್ತು ದಂತ ಆಸ್ಪತ್ರೆಯಲ್ಲಿ ಆ.03 ರಂದು ಸೋಮವಾರ ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಅಸ್ತಮಾ ಮತ್ತು ಅಲರ್ಜಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರದಲ್ಲಿ ಡಾ.ಮುನೀಶ್ವರ ಜಿ.ಬಿ.ರವರು ಮಾತನಾಡುತ್ತಾ ಈ ರೀತಿಯ ಅಲರ್ಜಿಗಳಿಂದ ಜನರು ತುಂಬಾ ತೊಂದರೆ ಅನುಭವಿಸುತ್ತಾರೆ. ಅಸ್ತಮಾ ಮತ್ತು ಅಲರ್ಜಿ ಕಾಯಿಲೆಗಳನ್ನು ಬಗ್ಗೆ ದೂರವಾಗಿರಬೇಕು ಎಂದು ಅರ್ಥಪೂರ್ಣವಾಗಿ ವಿವರಿಸಿದರು.


ಈ ಶಿಬಿರದಲ್ಲಿ ಬೆಂಗಳೂರಿನ ವೈದ್ಯರಾದ ಡಾ.ಪುನೀತ್ ಕೆ.ಎನ್.ರವರು ಮಾತನಾಡುತ್ತಾ ಸಿಬಿಸಿಟಿ ಸ್ಕ್ಯಾನ್ (ಕೋನ್‌ಭೀಮ್ ಕಂಪ್ಯೂಟರೈಸಡ್ ಟೊಮೋಗ್ರಫಿ) ಓಎಇ (ಓಟೋ ಅಕೌಸ್ಟಿಕ್ ಎಮಿಷನ್ಸ್) ಓಪಿಜಿ- ಪನೋರಮಿಕ್ ಡೆಂಟಲ್ ಎಕ್ಸ್-ರೇ, ವರ್ಟಿಗೋ ಲ್ಯಾಬ್ ಸೇವೆಗಳನ್ನು ಸುಧಾರಿತ ತಂತ್ರಜ್ಞಾನ ಆಧಾರಿತ ವೈದ್ಯಕೀಯ ತಪಾಸಣಾ ವ್ಯವಸ್ಥೆಗಳನ್ನು ಸಾರ್ವಜನಿಕ ಸೇವೆಗಳಿಗೆ ಸಮರ್ಪಿಸಲಾಗುತ್ತಿದೆ ಎಂದು ತಿಳಿಸಿದರು. ಈ ಸೌಲಭ್ಯಗಳಿಂದ ಕಿವಿ, ಮೂಗು, ಗಂಟಲು ದಂತ ಹಾಗೂ ಇತರೆ ಆರೋಗ್ಯ ಸಮಸ್ಯೆಗಳ ನಿಖರತೆ ಮತ್ತು ತ್ವರಿತ ರೋಗನಿರ್ಣಾಯಕ್ಕೆ ನೆರವಾಗಲಿದ್ದು, ಜಿಲ್ಲೆಯ ಜನತೆಗೆ ವೈದ್ಯಕೀಯ ಸೇವೆಗಳನ್ನು ಸ್ಥಳೀಯವಾಗಿಯೇ ದೊರೆಯಲಿದೆ. ಮೂಗಿನ ಅಲರ್ಜಿ ಮತ್ತು ಶ್ವಾಸಕೋಶದ ಅಲರ್ಜಿಗಳ ವ್ಯತ್ಯಾಸಗಳನ್ನು ವಿವರಿಸಿದರು.

ಇದೇ ಸಂದರ್ಭದಲ್ಲಿ ಗಾಣದಾಳ್ ಆಸ್ಪತ್ರೆಯ ಡಾ.ಸೌಮ್ಯ ಎಸ್. ಕೆ. ರವರು ಮಾತನಾಡುತ್ತಾ ರೋಗಿಗಳು ಅತಿಯಾಗಿ ಶೀನು ಬರುವುದು, ತುರಿಕೆ, ಕೆಮ್ಮು, ಉಸಿರಾಡಲು ತೊಂದರೆ, ಕಣ್ಣು ಕೆಂಪಾಗಿ ಉರಿಯುವುದು, ಮೈ ಉರಿ ಮತ್ತು ಬೆವರು ಸಾಲೆ, ಆಹಾರದ ಅಲರ್ಜಿ, ಧೂಳಿನ ಅಲರ್ಜಿ, ಸೀನುವುದು, ಮೂಗು ಕಟ್ಟುವುದು ಇದ್ದರೆ, ಶ್ವಾಸಕೋಶದ ಪರೀಕ್ಷಾ ಅವಶ್ಯಕ ಎಂದು ತಿಳಿಸಿದರು. ಅಲರ್ಜಿಯನ್ನು ರಕ್ತ ಪರೀಕ್ಷೆ ಮತ್ತು ಸ್ಕಿನ್ ಪ್ರಿಕ್ ಟೆಸ್ಟ್ ಎಂಬ ಪರೀಕ್ಷೆಗಳಿಂದ ಕಂಡು ಹಿಡಿದು ಚಿಕಿತ್ಸೆ ನೀಡಲಾಗುವುದು. ಆದ್ದರಿಂದ ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದರು.

ಈ ಶಿಬಿರದಲ್ಲಿ ಸುಮಾರು 100 ಕ್ಕೂ ಹೆಚ್ಚು ಅಸ್ತಮಾ ಮತ್ತು ಅಲರ್ಜಿ ತಪಾಸಣೆಯನ್ನು ಪಡೆದುಕೊಂಡರು. ಶಿಬಿರದಲ್ಲಿ ಎಂ.ಬಿ.ಬಿ.ಎಸ್. ವಿದ್ಯಾರ್ಥಿ ಡಾ.ತೃಪ್ತಿ.ಜಿ.ಎಂ, ತುಮಕೂರು ನಗರ ಮತ್ತು ಸುತ್ತಮುತ್ತಲಿನ ಸಾರ್ವಜನಿಕರು ಹಾಗೂ ಗಾಣದಾಳ್ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಈ ಶಿಬಿರದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.

ಶಿಕ್ಷಣಕ್ಕಾಗಿ ಹಾಲಪ್ಪ ಫೌಂಡೇಶನ್ ಸಹಕಾರ ಆಭಾದಿತ ಮುರುಳಿಧರ್ ಹಾಲಪ್ಪ

ಸೂರ್ಯಪ್ರಗತಿನ್ಯೂಸ್.ಕಾಂ



ಮಧುಗಿರಿ ; ಶಿಕ್ಷಣಕ್ಕೆ ಹಾಲಪ್ಪ ಫೌಂಡೇಶನ್ ಎಂದಿಗೂ ಸದಾ ಸಿದ್ಧವಿದ್ದು ಮಧುಗಿರಿ ತಾಲೂಕಿನ ಹಾಗೂ ಜಿಲ್ಲೆಯ ಯಾವುದೇ ವಿದ್ಯಾವಂತ ಮಕ್ಕಳು ಶಿಕ್ಷಣದ ವಿಚಾರವಾಗಿ ಏನೇ ಸಮಸ್ಯೆ ಬಂದರೂ ಹಾಲಪ್ಪ ಫೌಂಡೇಶನ್ ವತಿಯಿಂದ ಪರಿಹಾರ ಮಾಡಿಕೊಳ್ಳಲಾಗುತ್ತದೆ ಎಂದು ಹಾಲಪ್ಪ ಫೌಂಡೇಶನ್ ಅಧ್ಯಕ್ಷ ಹಾಗೂ ಕೆಪಿಸಿಸಿ ಉಪಾಧ್ಯಕ್ಷರಾದ ಮುರಳೀಧರ ಹಾಲಪ್ಪ ತಿಳಿಸಿದರು.

ತಾಲೂಕಿನ ಮಿಡಿಗೇಶಿ ಹೋಬಳಿಯ ಬೇಡತ್ತೂರು ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕ ನಾಗೇಂದ್ರಪ್ಪನವರು ನಿವೃತ್ತಿಯಾಗಿದ್ದು ಅವರ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಇಂದಿನ ಮಕ್ಕಳಲ್ಲಿ ಸರ್ಕಾರಿ ಶಾಲೆ ಎಂಬ ಕೀಳರಿಮೆ ಬರುವುದು ಬೇಡ. ಉತ್ತಮ ವಿದ್ಯೆ ಇಲ್ಲೂ ಕೂಡ ಸಿಗುತ್ತಿದ್ದು ಹೆಚ್ಚು ಕಲಿತು ಸಮಾಜದ ಆಸ್ತಿಯಾಗಬೇಕು. ಜಿಲ್ಲೆಯ ಡಿಸಿ, ಸಿಇಓ, ಹಾಗೂ ಎಸ್ ಪಿ ರವರು ಅವರ ಮಾತೃಭಾಷೆಯಲ್ಲಿಯೇ ಸರ್ಕಾರಿ ಶಾಲೆಯಲ್ಲಿ ಅಭ್ಯಾಸ ಮಾಡಿ ಇಂದು ಜಿಲ್ಲೆಯ ಹಿರಿಯ ಅಧಿಕಾರಿಗಳಾಗಿದ್ದಾರೆ. ಹಲವರು ದೊಡ್ಡ ಮಟ್ಟದಲ್ಲಿ ಉದ್ಯಮ ನಡೆಸುತ್ತಿದ್ದಾರೆ. ಹಾಗಾಗಿ ಯಾರು ಕೂಡ ಸರ್ಕಾರಿ ಶಾಲೆ ಎಂಬ ಕೀಳರಿಮೆಯನ್ನ ಹೊಂದಬಾರದು. ವಿಶ್ವದಲ್ಲಿ ಶಿಕ್ಷಣವೇ ಪ್ರಬಲ ಅಸ್ತ್ರವಾಗಿದ್ದು ಅದರಿಂದ ಎಲ್ಲವನ್ನ ಪಡೆಯಬಹುದಾಗಿದೆ. ನಮ್ಮ ಸರ್ಕಾರ ಪ್ರತಿ ಶಾಲೆಯಲ್ಲೂ ಕನ್ನಡ ದಿನಪತ್ರಿಕೆಯನ್ನು ಕಡ್ಡಾಯವಾಗಿ ಓದಬೇಕು ಎಂದು ಆದೇಶ ಮಾಡಿದ್ದು ಎಲ್ಲರೂ ಪ್ರಚಲಿತ ವಿದ್ಯಮಾನಗಳನ್ನು ತಿಳಿಯಲು ದಿನ ಪತ್ರಿಕೆಗಳನ್ನ ಕಡ್ಡಾಯವಾಗಿ ಅಭ್ಯಾಸ ಮಾಡಬೇಕು. ಇದು ನಿಮ್ಮ ಮುಂದಿನ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಗೂ ಸಾಮಾನ್ಯ ಜ್ಞಾನಕ್ಕೆ ಅನುಕೂಲವಾಗುತ್ತದೆ. ತಾಲೂಕಿನಲ್ಲಿ ಮಿಡಿಗೇಶಿ ಹೋಬಳಿಯ ಮಕ್ಕಳು ಎಸ್ ಎಸ್ ಎಲ್ ಸಿಯಲ್ಲಿ ಕೊನೆಯ ಸ್ಥಾನದಲ್ಲಿದ್ದು ಮುಂದಿನ ಪರೀಕ್ಷೆಯ ವೇಳೆಗೆ ಉತ್ತಮ ಫಲಿತಾಂಶವನ್ನು ತೋರಿಸಬೇಕು. ಅದಕ್ಕಾಗಿ ಮಕ್ಕಳು ಮತ್ತು ಶಿಕ್ಷಕರು ಹೆಚ್ಚಿನ ಶ್ರಮವಹಿಸಬೇಕಿದೆ. ನಾಗೇಂದ್ರಪ್ಪನವರು ಕೂಡ ತುಂಬಾ ನಂಬಿಕಸ್ಥ ಕುಟುಂಬದಿಂದ ಬಂದಿದ್ದು ಅವರ ಶಿಕ್ಷಕ ವೃತ್ತಿಯಲ್ಲಿ ಮಕ್ಕಳಿಗೆ ಗುಣಮಟ್ಟದ ವಿದ್ಯಾದಾನವನ್ನು ಮಾಡಿದ್ದಾರೆ. ಅವರ ನಿವೃತ್ತಿ ಜೀವನ ಸುಖಮಯವಾಗಿರಲಿ ಎಂದು ಆಶಿಸುತ್ತಾ ಪ್ರತಿಯೊಬ್ಬ ವಿದ್ಯಾರ್ಥಿಗೂ ಶಿಕ್ಷಣದ ವಿಚಾರದಲ್ಲಿ ಯಾವುದೇ ಸಮಸ್ಯೆ ಇದ್ದರೂ ಹಾಲಪ್ಪ ಫೌಂಡೇಶನ್ ನ ಸಂಪರ್ಕಿಸಬಹುದು ಎಂದು ಭರವಸೆ ನೀಡಿದರು.

ನಿವೃತ್ತಿ ಹೊಂದಿದ ಶಿಕ್ಷಕ ನಾಗೇಂದ್ರಪ್ಪ ಮಾತನಾಡಿ ಶಾಲೆಯಲ್ಲಿ ಮಕ್ಕಳ ಕಲಿಕೆಗೆ ಉತ್ತಮ ವಾತಾವರಣವನ್ನು ನಿರ್ಮಿಸಿದ ತೃಪ್ತಿ ಇದ್ದು ನನಗೆ ಪಾಠ ಮಾಡಿದ ಗುರುಗಳ ಮುಂದೆ ನಿವೃತ್ತಿ ಹೊಂದುತ್ತಿರುವುದು ಬದುಕಿನ ಮತ್ತೊಂದು ಸಾರ್ಥಕತೆ ಎಂದು ನಾನು ಭಾವಿಸಿದ್ದೇನೆ. ನನಗೆ ಪಾಠ ಮಾಡಿದ ಗುರುಗಳಿಗೆ ನಾನು ಏನು ನೀಡಿದರು ಸಾಲದು. ಅದಕ್ಕಾಗಿ ಈ ಭಾಗದ ಮಕ್ಕಳಿಗೆ ಉತ್ತಮ ಶಿಕ್ಷಣವನ್ನ ನೀಡಿದ ಸಾರ್ಥಕತೆ ನನಗಿದ್ದು ಮುಂದಿನ ದಿನಗಳಲ್ಲಿ ಶಿಕ್ಷಣಕ್ಕಾಗಿ ಯಾವುದೇ ರೀತಿಯ ಸಹಾಯ ಮಾಡಲು ನಾನು ಸಿದ್ಧ. ಹಾಲಪ್ಪ ಫೌಂಡೇಶನ್ ವತಿಯಿಂದ ಹೋಬಳಿಯ ಶಾಲೆಗಳಿಗೆ ಹತ್ತಾರು ಉಪಯೋಗವಾಗಿದ್ದು ಅದು ಮುಂದುವರೆಯಲಿ ಎಂದು ಕೋರಿದರು.

ಈ ಸಂದರ್ಭದಲ್ಲಿ ನಿವೃತ್ತ ಶಿಕ್ಷಕ ನಾಗೇಂದ್ರಪ್ಪನವರ ಗುರುಗಳಾದ ಎ.ವಿ. ವೆಂಕಟರಾಮರೆಡ್ಡಿ, ಗಂಗಾಧರಪ್ಪ, ನಾಗರಾಜಪ್ಪ, ಪ್ರೌಢಶಾಲಾ ಮುಖ್ಯ ಶಿಕ್ಷಕ ಗೋವಿಂದ ನಾಯಕ, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ಪುಟ್ಟಲಿಂಗಯ್ಯ, ನಿವೃತ್ತ ಮುಖ್ಯ ಶಿಕ್ಷಕ ತಿಪ್ಪೇಸ್ವಾಮಿ, ನಿವೃತ್ತ ಆರ್ ಟಿ ಓ ಕೃಷ್ಣಾರೆಡ್ಡಿ, ಬಿಇಓ ಹನುಮಂತರಾಯಪ್ಪ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷ ನರಸೇಗೌಡ, ಎಸ್‌ಡಿಎಂಸಿ ಸಮಿತಿ ಸದಸ್ಯರು, ಇತರೆ ಶಿಕ್ಷಕರು, ಮಕ್ಕಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಕರಗ ಮಹೋತ್ಸವಕ್ಕೆ ಸಕಲ ಸಿದ್ಧತೆ : ಇಕ್ಬಾಲ್ ಹುಸೇನ್

ಮಹೋತ್ಸವದಲ್ಲಿ ಖ್ಯಾತ ಗಾಯಕರಿಂದ ಸಂಗೀತ ಸಂಜೆ । ಸಿಎಂ ಡಿಕೆಶಿ, ನಟ ಸುದೀಪ್ ಸಹಿತ ಹಲವು ಗಣ್ಯರು ಭಾಗಿ।





ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ: ದುಷ್ಟ ಶಿಕ್ಷಕಿ ಶಿಷ್ಟರಕ್ಷಕಿಯಾದ ತಾಯಿ ಚಾಮುಂಡೇಶ್ವರಿ ಎಲ್ಲರಿಗೂ ಅನುಗ್ರಹಿಸಲಿ, ಉತ್ತಮ ಮಳೆ ಬೆಳೆಯಾಗಿ ಇಡೀ ಜಿಲ್ಲೆಯಲ್ಲಿ ಸಮೃದ್ಧಿ ಕರುಣಿಸಲಿ ಎಂದು ಪ್ರಾರ್ಥಿಸುವ ಕರಗ ಮಹೋತ್ಸವವನ್ನು ಆಚರಿಸಲಾಗುತ್ತಿದ್ದು, ಇದಕ್ಕಾಗಿ ಸಕಲ ಸಿದ್ಧತೆಗಳನ್ನು ನಡೆಸಲಾಗುತ್ತಿದೆ ಎಂದು ಶಾಸಕ ಇಕ್ಬಾಲ್ ಹುಸೇನ್ ತಿಳಿಸಿದರು.

ಇಲ್ಲಿನ ಜೂನಿಯರ್ ಕಾಲೇಜು ಮೈದಾನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿವರ್ಷ ಆಷಾಡ ಮಾಸದಲ್ಲಿ ಚಾಮುಂಡೇಶ್ವರಿ ಕರಗ ಮಹೋತ್ಸವವನ್ನು ನಗರದ ಜನತೆ ಮೈಸೂರು ದಸರಾ ಮಾದರಿಯಲ್ಲಿ ವಿಜೃಂಭಣೆಯಿಂದ ಆಚರಿಸುವುದು ವಾಡಿಕೆ. ಈ ಬಾರಿಯೂ ಅಷ್ಟೇ ವಿಜೃಂಭಣೆಯಿಂದ ಕರಗ ಮಹೋತ್ಸವವನ್ನು ಆಚರಿಸಲಿದ್ದೇವೆ ಎಂದರು.

ಮಂಗಳವಾರ ಮತ್ತು ಬುಧವಾರ ನಡೆಯಲಿರುವ ನಗರದ ಐತಿಹಾಸಿಕ ಚಾಮುಂಡೇಶ್ವರಿ ಮತ್ತು ಇತರೆ ಶಕ್ತಿದೇವತೆಗಳ ಕರಗಮಹೋತ್ಸವವನ್ನು ಎಲ್ಲಾ ಜನರ ಜೊತೆಗೂಡಿ ವಿಜೃಂಭಣೆಯಿಂದ ಆಚರಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಈ ವರ್ಷದ ಕರಗ ಮಹೋತ್ಸವ ಹಲವು ಹೊಸತನಗಳನ್ನು ಒಳಗೊಂಡಿದೆ ಎಂದು ಮಾಹಿತಿ ನೀಡಿದರು.

ಆಕರ್ಷಕ ವಿದ್ಯುತ್ ಅಲಂಕಾರ: ಚಾಮುಂಡೇಶ್ವರಿ ಹಬ್ಬದ ಹಿನ್ನೆಲೆಯಲ್ಲಿ ಇಡೀ ಪಟ್ಟಣವನ್ನು ವರ್ಣರಂಜಿತ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ. ಕರಗ ಮಹೋತ್ಸವ ನಗರದ ಕೋಮು ಸೌಹಾರ್ದತೆಯ ಪ್ರತೀಕವಾಗಿರುವ ಹಿನ್ನೆಲೆಯಲ್ಲಿ ಜೂನಿಯರ್ ಕಾಲೇಜು ಮೈದಾನದಲ್ಲಿ ಮೂರು ಧರ್ಮಗಳ ದೇವರನ್ನು ಬಿಂಬಿಸುವ ವಿದ್ಯುತ್ ದೀಪಗಳಿಂದ ಅಲಂಕೃತವಾದ ಕಟೌಟ್ ನಿರ್ಮಿಸಲಾಗಿದೆ. ಹೊಸ ಆಕರ್ಷಣೆಯಾಗಿ ಎಸ್ಪಿ ಕಚೇರಿ ಬಳಿ ಬಟರ್ ಫ್ಲೈ ವರ್ಲ್ ಲೈಟಿಂಗ್, ಐಜೂರು ವೃತ್ತ, ವಿವೇಕಾನಂದ ಸರ್ಕಲ್ ಸೇರಿದಂತೆ ಹಲವು ವೃತ್ತದಲ್ಲಿ ಲೈಟಿಂಗ್ ಟ್ರೀ ಅಳವಡಿಸಲಾಗಿದೆ. ವಡೇರಹಳ್ಳಿ ಹೆಬ್ಬಾಗಿಲಿನಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬೃಹತ್ ಲೈಟಿಂಗ್ ಕಟೌಟ್, ಐಜೂರು ಹಾಗೂ ಜೂನಿಯರ್ ಕಾಲೇಜು ಬಳಿ ಸ್ವಾಗತ ಕಮಾನಿನ ಲೈಟಿಂಗ್ ಬೋರ್ಡ್ ಅಳವಡಿಸಲಾಗಿದೆ ಎಂದು ವಿವರಿಸಿದರು.

ಸಿಎಂ ಡಿಕೆಶಿ ಭಾಗಿ: ಕರಗ ಮಹೋತ್ಸವದ ಅಂಗವಾಗಿ ಮಂಗಳವಾರ (ಆ.4) ರಾತ್ರಿ ಜಿಲ್ಲಾ ಕ್ರೀಡಾಂಗಣದಲ್ಲಿ ಸಂಗೀತ ಸಂಜೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ, ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್, ಶಾಸಕರಾದ ಎಚ್.ಸಿ.ಬಾಲಕೃಷ್ಣ ಸಿ.ಪಿ.ಯೋಗೇಶ್ವರ್, ಡಾ.ರಂಗನಾಥ್, ಗಣಿಗರವಿ, ಉದಯ್, ವಿಧಾನ ಪರಿಷತ್ ಸದಸ್ಯರಾದ ಎಸ್.ರವಿ, ಪುಟ್ಟಣ್ಣ, ರಾಮೋಜಿಗೌಡ, ಸುಧಾಮ್ ದಾಸ್, ಮಾಜಿ ಶಾಸಕ ಸಿ.ಎಂ.ಲಿಂಗಪ್ಪ, ಕೆ.ರಾಜು ಇನ್ನೂ ಮುಂತಾದವರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸಂಗೀತ ಮತ್ತು ಸಾಂಸ್ಕೃತಿಕ ಸಂಜೆ ಕಾರ್ಯಕ್ರಮದಲ್ಲಿ ಚಿತ್ರನಟರಾದ ಸುದೀಪ್, ನೀನಾಸಂ ಸತೀಶ್, ಗಿಲ್ಲಿ ನಟ ನಟರಾಜ್, ನಟಿ ರಚಿತಾರಾಮ್ ಸೇರಿದಂತೆ ಖ್ಯಾತ ನಟ ನಟಿಯರು, ಹೆಸರಾಂತ ಗಾಯಕ ನವೀನ್ ಸಜ್ಜು ತಂಡ, ಆಲ್ ಓಕೆ ತಂಡ, ಚಂದನ್ ಶೆಟ್ಟಿ ತಂಡ, ಸನ್ನಿಧಿ ಗಣೇಶ್ ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ಹಂಚಿಕೊಂಡರು.

ಪೊಲೀಸ್ ನಿಯೋಜನೆ :

ಕರಗ ಮಹೋತ್ಸವದ ಹಿನ್ನೆಲೆಯಲ್ಲಿ ಬಂದೋಬಸ್ತ್ ಕಾರ್ಯಕ್ಕೆ 1500ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಇದರೊಂದಿಗೆ ಸಿಸಿ ಟಿ.ವಿ ಅಳವಡಿಕೆ, ಡ್ರೋಣ್ ಕ್ಯಾಮರಾ ಕಣ್ಗಾವಲು ಸೇರಿದಂತೆ ಅಗತ್ಯ ಭದ್ರತಾ ಕಾರ್ಯವನ್ನು ಕೈಗೊಂಡಿದ್ದು, ಕರಗ ಮಹೋತ್ಸವವನ್ನು ಶಾಂತಿ ಮತ್ತು ಸಂಭ್ರಮದಿಂದ ಆಚರಿಸಲು ನಾವೆಲ್ಲರೂ ಸಜ್ಜಾಗೋಣ ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಕೆ.ರಾಜು, ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಸದಸ್ಯರಾದ ನಿಜಾಮುದ್ದೀನ್ ಷರೀಫ್, ಅಜ್ಮತ್, ಆಯಿಶಾ ಬಾನು, ನಾಗಮ್ಮ, ಜಯಲಕ್ಷ್ಮಮ್ಮ ಮುಖಂಡರಾದ ವೆಂಕಟೇಶ್, ರೈಡ್ ನಾಗರಾಜ್, ಸಿ.ರಾಮಯ್ಯ, ನರಸಿಂಹಯ್ಯ, ರವಿಕುಮಾರ್, ಪ್ರಾಣೇಶ್, ಲೋಹಿತ್ ಬಾಬು ಸೇರಿದಂತೆ ಅನೇಕರು ಇದ್ದರು.

ಶಾಸಕರಿಂದ ಶಕ್ತಿದೇವತೆಗಳಿಗೆ ಮಡಿಲಕ್ಕಿ ಸಮರ್ಪಣೆ ಕರಗ ಮಹೋತ್ಸವದ ಹಿನ್ನೆಲೆಯಲ್ಲಿ ಶಾಸಕ ಇಕ್ಬಾಲ್‌ಹುಸೇನ್ ನಗರದ ಶಕ್ತಿದೇವತೆಗಳ ದೇವಾಲಯಕ್ಕೆ ಮಡಿಲಕ್ಕಿ ಸೇವೆಯನ್ನು ಸಲ್ಲಿಸಿದರು. ನಗರದ ಚಾಮುಂಡೇಶ್ವರಿ ಕಲ್ಯಾಣಮಂಟಪದಲ್ಲಿ ದೇವಾಲಯಗಳಿಗೆ ಮಡಿಲಕ್ಕಿ ಸೇವೆಯನ್ನುಸಲ್ಲಿಸಿ ಶಕ್ತಿದೇವತೆಗಳ ಕರುಣೆಯಿಂದ ನಗರದ ಜನತೆಗೆ ಒಳಿತಾಗಲಿ ಎಂದು ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಇಕ್ಬಾಲ್‌ಹುಸೇನ್, ಕಳೆದ 7 ವರ್ಷಗಳಿಂದ ನಗರದ 12 ದೇವಾಲಯಗಳಿಗೆ ಮಡಿಲಕ್ಕಿ ಸೇವೆ ನೀಡುತ್ತಾ ಬಂದಿದ್ದೇನೆ. ಈ ವರ್ಷ 16 ದೇವಾಲಯಗಳಿಗೆ ವಿಸ್ತರಣೆ ಆಗಿದೆ. ತಾಯಿಯು ನನಗೆ ಶಕ್ತಿ ಕೊಟ್ಟಿದ್ದು ಈ ಕ್ಷೇತ್ರದ ಜನರ ಸೇವೆಯನ್ನು ಮಾಡಲು ಮತ್ತಷ್ಟು ಶಕ್ತಿ ಕೊಡುವಂತೆ ಪ್ರಾರ್ಥಿಸಿದ್ದೇನೆ ಎಂದು ತಿಳಿಸಿದರು. ಶಕ್ತಿದೇವತೆಯಾಗಿರುವ ಶ್ರೀ ಚಾಮುಂಡೇಶ್ವರಿ ಅಮ್ಮನವರು ಮತ್ತು ಕ್ಷೇತ್ರದ ಜನರ ಆಶೀರ್ವಾದದಿಂದ ನಾನು ಶಾಸಕನಾಗಿ ಆಯ್ಕೆಯಾಗಿ ದೇನೆ. ಶಾಸಕ ಸ್ಥಾನವನ್ನು ಅಧಿಕಾರ ಎಂದು ಭಾವಿಸದೆ ನಿಮ್ಮಗಳ ಸೇವಗೆ ಸಿಕ್ಕ ಅವಕಾಶ ಎಂದು ಭಾವಿಸಿ ಪ್ರತಿನಿತ್ಯ ನಿಮ್ಮಗಳ ಜೊತೆಯಿದ್ದೇನೆ. ಇದಕ್ಕೆ ಶ್ರೀ ಚಾಮುಂಡೇಶ್ವರಿ ದೇವಿಯ ಪ್ರೇರಣೆ, ಅನುಗ್ರಹ ನನಗೆ ದೊರೆತಿದೆ ಎಂದರು.

ನವಶಕ್ತಿ ದೇವತೆಗಳ ಕರಗ ಮಹೋತ್ಸವಕ್ಕೆ ಆರ್ಥಿಕ ಸಹಕಾರ



ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ: ಪಾರಂಪರಿಕವಾಗಿ ನಡೆದುಕೊಂಡು ಬರುತ್ತಿರುವ ನವಶಕ್ತಿ ದೇವತೆಗಳ ಕರಗ ಮಹೋತ್ಸವಕ್ಕೆ ನಗರಸಭೆ ವತಿಯಿಂದ ಆರ್ಥಿಕ ಸಹಕಾರ ನೀಡಲಾಗುತ್ತಿದೆ ಎಂದು ನಗರಸಭಾಧ್ಯಕ್ಷ ಕೆ. ಶೇಷಾದ್ರಿ ತಿಳಿಸಿದರು.

ನಗರಸಭೆಯ ಸಭಾಂಗಣದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಭಂಡಾರಮ್ಮ, ಮಗ್ಗದ ಕೇರಿ ಮಾರಮ್ಮ, ಗಾಂಧಿನಗರದ ಆದಿಶಕ್ತಿ, ಐಜೂರಿನ ಆದಿಶಕ್ತಿ, ಕೊಂಕಾಣಿ ದೊಡ್ಡಿಯ ಆದಿಶಕ್ತಿ, ಬಿಸಿಲು ಮಾರಮ್ಮ, ಗಿಂಡಿ ಕರಗ, ಮುತ್ತುಮಾರಮ್ಮ ಮತ್ತು ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗ ಮಹೋತ್ಸವಗಳಿಗೆ ನಗರಸಭೆಯ ವತಿಯಿಂದ ಚೆಕ್ಕುಗಳನ್ನು ವಿತರಿಸಿ ಅವರು ಮಾತನಾಡಿದರು.

2026–27ನೇ ಸಾಲಿನ ಆಯವ್ಯಯದಲ್ಲಿ ಕರಗ ಮಹೋತ್ಸವಕ್ಕೆ 5 ಲಕ್ಷ ರೂ ಮೀಸಲಿಡಲಾಗಿತ್ತು. ನಗರದಲ್ಲಿ ಕರಗ ಮಹೋತ್ಸವಗಳ ಆಚರಣೆ ದಶಕಗಳಿಂದ ನಡೆದುಕೊಂಡು ಬರುತ್ತಿದೆ. ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗಕ್ಕೆ ಸುಮಾರು 100 ವರ್ಷಗಳ ಇತಿಹಾಸವಿದೆ. ದಶಕಗಳ ಹಿಂದೆ ಇದ್ದ ಗ್ರಾಮಗಳಲ್ಲಿ ಕರಗ ಆಚರಿಸಲಾಗಿತ್ತು. ಗ್ರಾಮದ ಹಬ್ಬದಂತೆ ನಡೆದುಕೊಂಡು ಬರುತ್ತಿರುವ ಈ ಆಚರಣೆಗೆ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳು ಸೇರಿ ಎಲ್ಲ ಕುಟುಂಬಗಳು ತಮ್ಮ ಕೈಲಾದಷ್ಟು ದೇಣಿಗೆ ನೀಡಿ ದೇವರಿಗೆ ಅಲಂಕಾರ ಸೇವೆ, ಗ್ರಾಮದಲ್ಲಿ ತಳಿರು ತೋರಣ, ವಿದ್ಯುತ್ ದೀಪಗಳ ವ್ಯವಸ್ಥೆ ಮುಂತಾದವುಗಳಿಗೆ ಸಹಕಾರ ನೀಡಿಕೊಂಡು ಬರುತ್ತಿದ್ದರು ಎಂದು ಹೇಳಿದರು.

ಇದೀಗ ಈ ಗ್ರಾಮಗಳು ನಗರಸಭೆಯ ಭಾಗವಾಗಿ ವಾರ್ಡುಗಳ ರೂಪ ಪಡೆದುಕೊಂಡಿವೆ. ಕರಗ ಆಚರಣೆ ನಿರಂತರವಾಗಿ ನಡೆಯುತ್ತಿದೆ. ಈ ಆಚರಣೆಗಳು ಸಮಾಜದ ಆಚರಣೆಗಳಾಗಿ ಹೊರಹೊಮ್ಮಿದ್ದು, ಈ ಒತ್ತಾಸೆ ಮುಂದುವರೆಯಬೇಕು ಎಂಬ ಉದ್ದೇಶದಲ್ಲಿ ನಗರಸಭೆ ವತಿಯಿಂದ ಆರ್ಥಿಕ ಸಹಕಾರ ನೀಡಲಾಗುತ್ತಿದೆ ಎಂದು ವಿವರಿಸಿದರು.

ಕರಗ ಮಹೋತ್ಸವವನ್ನು ವೀಕ್ಷಿಸಲು ಲಕ್ಷಾಂತರ ಮಂದಿ ಆಗಮಿಸುವುದು ಸಹ ವಾಡಿಕೆಯಾಗಿದೆ. ಯಾರೊಬ್ಬರಿಗೂ ಅನಾನುಕೂಲವಾಗದಂತೆ ಆಯಾ ದೇವಾಲಯಗಳ ಉಸ್ತುವಾರಿಗಳು, ಆಡಳಿತ ಮಂಡಳಿ ಸದಸ್ಯರು, ಪದಾಧಿಕಾರಿಗಳು ಸೂಕ್ತ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು. ಎಲ್ಲ ನಾಗರೀಕರು ಜಾತಿ, ಧರ್ಮ ಮರೆತು ಎಲ್ಲರೂ ಒಟ್ಟಾಗಿ ಈ ಆಚರಣೆಯಲ್ಲಿ ಭಾಗಿಯಾಗಬೇಕು. ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಬೇಕು ಎಂದು ಮನವಿ ಮಾಡಿದರು.

ನಗರಸಭೆ ವತಿಯಿಂದ ನೀಡಲಾದ ಚೆಕ್ಕುಗಳನ್ನು ಆಯಾ ದೇವಾಲಯಗಳ ಉಸ್ತುವಾರಿಗಳು ಹಾಗೂ ಕರಗಧಾರಕರು ಪಡೆದುಕೊಂಡರು.

ಈ ಸಂದರ್ಭದಲ್ಲಿ ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಸ್ಥಾಯಿ ಸಮಿತಿ ಅಧ್ಯಕ್ಷ ಆರಿಫ್, ಸದಸ್ಯರಾದ ಸೋಮಶೇಖರ್ (ಮಣಿ), ಮಂಜುನಾಥ್, ಅಜ್ಮತ್, ಮುತ್ತುರಾಜ್ ಸೇರಿದಂತೆ ಹಲವರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಸಂವಿಧಾನ ರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ ಅತ್ಯಂತ ಪ್ರಮುಖವಾಗಿದೆ



ಸೂರ್ಯಪ್ರಗತಿನ್ಯೂಸ್.ಕಾಂ

ಆನೇಕಲ್ : ತಾಲ್ಲೂಕಿನ ಎಲೆಕ್ಟ್ರಾನಿಕ್‌ಸಿಟಿಯ ಐಎಸ್‌ಬಿಆರ್ ಕಾನೂನು ಕಾಲೇಜಿನಲ್ಲಿ ಕಾನೂನು ವಿಭಾಗದ ತರಗತಿಗಳ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಮಾತನಾಡಿ ಸಂವಿಧಾನ ರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ ಅತ್ಯಂತ ಪ್ರಮುಖವಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಉನ್ನತ ಸಾಧನೆ ಮಾಡುವ ಮೂಲಕ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಬಲಗೊಳಿಸಬೇಕು. ದೇಶದ ಸಮಗ್ರತೆ ಮತ್ತು ಐಕ್ಯತೆಯನ್ನು ಗಟ್ಟಿಗೊಳಿಸಲು ಶಿಕ್ಷಣ ಅತ್ಯಂತ ಪ್ರಮುಖವಾಗಿದೆ. ಕಾರ್ಯಾಂಗ, ಶಾಸಕಾಂಗದಲ್ಲಿನ ಭ್ರಷ್ಟಾಚಾರ ವ್ಯವಸ್ಥೆಯನ್ನು ಬೇರು ಸಮೇತ ಕಿತ್ತುಹಾಕಲು ಯುವಕರು ಸಂಕಲ್ಪ ಮಾಡಬೇಕು. ಸಾರ್ವಜನಿಕ ಸ್ನೇಹಿ ಆಡಳಿತ ನೀಡುವ ನಿಟ್ಟಿನಲ್ಲಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಶ್ರಮ ವಹಿಸಬೇಕು ಎಂದರು.

ಕಾನೂನು ವಿದ್ಯಾರ್ಥಿಗಳು ನ್ಯಾಯ, ಸತ್ಯದ ಪರವಾಗಿ ನಿಲ್ಲಬೇಕು. ಕಾನೂನು ವೃತ್ತಿ ಅತ್ಯಂತ ಶ್ರೇಷ್ಠವಾದ ವೃತ್ತಿಯಾಗಿದೆ. ವಿದ್ಯಾರ್ಥಿಗಳು ಪದವಿ ಪಡೆಯುವ ಹಂತದಿಂದಲೇ ನ್ಯಾಯಾಂಗ ಕ್ಷೇತ್ರದಲ್ಲಿ ಸಾಧನೆ ಮಾಡಲು ಸಜ್ಜಾಗಬೇಕು. ನ್ಯಾಯಾಂಗ ಪರೀಕ್ಷೆಗಳನ್ನು ಎದುರಿಸಲು ಕಾನೂನು ಪದವಿ ಪಡೆಯುತ್ತಿರುವ ವಿದ್ಯಾರ್ಥಿಗಳು ಶ್ರಮಿಸಬೇಕು ಎಂದರು.

ಐಎಸ್‌ಬಿಆರ್ ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷ ಮನೀಶ್ ಕೊಠಾರಿ ಮಾತನಾಡಿ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಹೊಂದಿಕೊಂಡಿರುವ ಐಎಸ್‌ಬಿಆರ್ ಕಾಲೇಜಿನಲ್ಲಿ ಹೆಚ್ಚು ಮಂದಿ ಗ್ರಾಮೀಣ ಪ್ರದೇಶದವರಿದ್ದಾರೆ. ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ನ್ಯಾಯಾಂಗ ಪರೀಕ್ಷೆಗಳಿಗೆ ತರಬೇತಿ ಶಿಬಿರಗಳನ್ನು ನಡೆಸಲು ಸಿದ್ಧತೆ ನಡೆಸಲಾಗಿದೆ. ಐಎಸ್‌ಬಿಆರ್ ಕಾನೂನು ಕಾಲೇಜಿನಲ್ಲಿ ಪ್ರಾಯೋಗಿಕ ಜ್ಞಾನ ನೀಡಲು ಹೆಚ್ಚು ಆದ್ಯತೆ ನೀಡಲಾಗಿದೆ. ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಸೇರಿದಂತೆ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿ ನಿಟ್ಟಿನಲ್ಲಿ ಶೈಕ್ಷಣಿಕ ಪಠ್ಯಗಳನ್ನು ರೂಪಿಸಲಾಗಿದೆ ಎಂದರು.

ಸುಪ್ರೀಂ ಕೋರ್ಟ್ ವಕೀಲ ಶಿಶಿರ್ ರಾಜ್, ಭಾರತ ಸರ್ಕಾರ ವಾಣಿಜ್ಯ ಮಂಡಳಿಯ ಸಹಾಯಕ ಕಾರ್ಯದರ್ಶಿ ಬಸುದೇವ್ ಮುಖರ್ಜಿ, ಇನ್ಫೋಸಿಸ್‌ನ ಹಿರಿಯ ಉಪಾಧ್ಯಕ್ಷೆ ಅಮಿತ್ರ ಶ್ರೀಕಾಂತ್, ಐಎಂಎಸ್ ಯುನಿಸನ್ ವಿಶ್ವವಿದ್ಯಾಲಯ ಅನಿತಾ ರಾಮಚಂದ್ರರ್, ವಕೀಲರಾದ ಪ್ರಸಾದ್ ಸುಬ್ಬಣ್ಣ, ನಾಗಶ್ರೀ, ಪ್ರಿಯಾಂಕ ಕ್ವಾತ್ರ, ಐಎಸ್‌ಬಿಆರ್ ಪ್ರಾಚಾರ್ಯ ಬಲವಂತ್ ಕಲಸ್ಕರ್, ಐಎಸ್‌ಬಿಆರ್ ಆಡಳಿತ ಮಂಡಳಿಯ ಕೆ.ಎಸ್.ಆನಂದರಾಮ್, ಡಾ.ಸಿ. ಮನೋಹರ್, ಆರ್.ನರಸಿಂಹನ್, ನಿರಂಜನ್, ನೀಲಾ ಚೌಟಾಯ್, ಸಾವಿತ್ರ, ಕವಿತಾ ಮಧುಸೂದನ್ ಇದ್ದರು.

ಕೆಎಸ್‌ಆರ್‌ಟಿಸಿ ನಿವೃತ್ತ ಸಿಬ್ಬಂದಿಗೆ ಬೀಳ್ಕೊಡುಗೆ




ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ನಗರದಲ್ಲಿ ಸಾರಿಗೆ ಸಂಸ್ಥೆಯ ಸಂಸ್ಥಾಪನಾ ದಿನಾಚರಣೆ ಆಚರಣೆ ಹಾಗೂ ಜುಲೈ ತಿಂಗಳಲ್ಲಿ ನಿವೃತ್ತರಾದ ಸಿಬ್ಬಂದಿಗೆ ಗೌರವ ಬೀಳ್ಕೊಡುಗೆ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ಕೆಎಸ್‌ಆರ್‌ಟಿಸಿಯಲ್ಲಿ ವಿವಿದ ಹುದ್ದೆಗಳಲ್ಲಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಆಸೀಫ್ ಉಲ್ಲಾ ಷರೀಫ್, ಬನ್ನಿ ಸಾಬ್‌ಎಸ್, ವಿ. ವಿಜಯೇಂದ್ರರಾವ್, ಅಬ್ದುಲ್ ಸುಭಾನ್ ಇವರನ್ನು ವಿಭಾಗೀಯ ನಿಯಂತ್ರಣಾಧಿಕಾರಿ ಬಸವರಾಜ್ ಹಾಗೂ ನಿವೃತ್ತ ಅಧಿಕಾರಿ ಗಜೇಂದ್ರ ಕುಮಾರ್ ಅವರನ್ನು ಸನ್ಮಾನಿಸಿ ಗೌರವಿಸಿದರು.

ವಿಭಾಗೀಯ ಸಂಚಾಲನಾಧಿಕಾರಿ ಮಂಜುನಾಥ್ , ಕಾರ್ಮಿಕಕಲ್ಯಾಣಾಧಿಕಾರಿ ರಾಧಾ, ನಿವೃತ್ತಘಟಕ ವ್ಯವಸ್ಥಾಪಕ ತುಳಸಿ ರಾಮ್, ನಿಕಟಪೂರ್ವ ಎನ್‌ಎಸಿ ಅಧ್ಯಕ್ಷ ದೊಡ್ಡಗೌಡ, ಪುಟ್ಟರಾಜು, ಸಂಸ್ಥೆಯ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಭೀಮಾ ನಾಯ್ಕ್, ಖಜಾಂಚಿ ಕೆ. ರಾಜಗೋಪಾಲ್, ಮುಖಂಡರಾದ ವಿ.ಡಿ. ಹನುಮಂತರಾಯ, ಶಿವಶಂಕರ್, ಜಿ.ವಿ. ಉಮೇಶ್ ಕುಮಾರ್, ಸುಬ್ರಮಣಿ, ಗೋಪಾಲ್ ಮೊದಲಾದವರು ಭಾಗವಹಿಸಿದ್ದರು.

ಜಂತರ್ ಮಂತರ್ ಪ್ರತಿಭಟನೆ ಎಫೆಕ್ಟ್: ಆ. 6 ರಂದು Gen Z, ಜನರಲ್ ಆಲ್ಫಾ ಜೊತೆ RSS ಮುಖ್ಯಸ್ಥ ಮೋಹನ್ ಭಾಗವತ್ ಸಂವಾದ



ಸೂರ್ಯಪ್ರಗತಿನ್ಯೂಸ್.ಕಾಂ

ಮುಂಬೈ: ಕಾಕ್ರೋಚ್ ಜನತಾ ಪಾರ್ಟಿ(ಸಿಜೆಪಿ) ನೇತೃತ್ವದ ವಿದ್ಯಾರ್ಥಿಗಳ ಪ್ರತಿಭಟನೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ ದೊಡ್ಡ ಸವಾಲಾಗಿ ಪರಿಣಮಿಸುತ್ತಿರುವ ಬೆನ್ನಲ್ಲೇ, ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ಮುಖ್ಯಸ್ಥ ಮೋಹನ್ ಭಾಗವತ್ ಅವರು ಆಗಸ್ಟ್ 6 ರಂದು ಜನರಲ್ ಝಡ್ ಮತ್ತು ಜನರಲ್ ಆಲ್ಫಾ ಜೊತೆ ಸಂವಾದ ನಡೆಸಲಿದ್ದಾರೆ.

ಪ್ರಕಟಣೆಯ ಪ್ರಕಾರ, ಮುಂಬೈನ ನೀತಾ ಮುಖೇಶ್ ಅಂಬಾನಿ ಕಲ್ಚರಲ್ ಸೆಂಟರ್‌ನಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದ್ದು, ಸಮ್ಮೇಳನದಲ್ಲಿ ದೇಶದ 100ಕ್ಕೂ ಹೆಚ್ಚು ನಗರಗಳ 15ರಿಂದ 19 ವರ್ಷದೊಳಗಿನ 2,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಭಾರತದ ಅಂತರರಾಷ್ಟ್ರೀಯ ಏಕೀಕರಣ ರಾಷ್ಟ್ರಗಳ ಚಳುವಳಿ(ಐಐಎಂಯುಎನ್) 15 ನೇ ವಾರ್ಷಿಕೋತ್ಸವದ ಅಂಗವಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

"ನಾಯಕತ್ವ ಎಂದರೆ ಮುಂದಿನ ಪೀಳಿಗೆಗೆ ಮಾರ್ಗದರ್ಶನ ನೀಡುವುದಷ್ಟೇ ಅಲ್ಲ, ಅವರ ಮಾತುಗಳನ್ನು ಆಲಿಸುವುದೂ ಆಗಿದೆ. ಈ ಮಹತ್ವದ ಘಟ್ಟದಲ್ಲಿ ಇಂತಹ ಸಂವಾದ ಈಗ ಹಿಂದೆಂದಿಗಿಂತಲೂ ಹೆಚ್ಚು ಅಗತ್ಯವಾಗಿದೆ. ನಮ್ಮ ಆಹ್ವಾನವನ್ನು ಸ್ವೀಕರಿಸಿ ಈ ಸಮಾವೇಶಕ್ಕೆ ಆಗಮಿಸಲು ಸಮ್ಮತಿಸಿದ ಮೋಹನ್ ಭಾಗವತ್ ಅವರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ" ಎಂದು ಐಐಎಂಯುಎನ್ ಸಂಸ್ಥಾಪಕ ರಿಷಭ್ ಶಾ ಅವರು ಹೇಳಿದ್ದಾರೆ.

ಎನ್ ಸಿ ಸಿ ಕೆಡೆಟ್ ಗಳಿಂದ ಸ್ವಚತಾ ಕಾರ್ಯ

ಸೂರ್ಯಪ್ರಗತಿನ್ಯೂಸ್.ಕಾಂ

ಕನಕಪುರ: ನಗರದ ರೂರಲ್ ಕಾಲೇಜ್‌ನ ಎನ್‌ಸಿಸಿ ಘಟಕದ ವತಿಯಿಂದ "ಸಶಕ್ತ ಭಾರತ ರಾಷ್ಟ್ರಗೌರವ, ದೇಶಭಕ್ತಿ, ರಾಷ್ಟ್ರೀಯತೆ, ಯುವ ಸೇತು" ಎಂಬ ಧ್ಯೇಯ ದಡಿ ಪ್ರತಿಮೆ ಸ್ವಚ್ಛತಾ ಕಾರ್ಯಕ್ರಮ ಮತ್ತು ದೇಶಭಕ್ತಿ ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಸಾರ್ವಜನಿಕ ಸ್ಮಾರಕಗಳು ಮತ್ತು ರಾಷ್ಟ್ರೀಯ ಚಿಹ್ನೆಗಳ ನಿರ್ವಹಣೆಯನ್ನು ಪ್ರೋತ್ಸಾಹಿಸುವ ಎನ್‌ಸಿಸಿಯ ಉಪಕ್ರಮಗಳಿಗೆ ಅನುಗುಣವಾಗಿ ಸ್ವಚ್ಛತೆ ಹಾಗೂ ರಾಷ್ಟ್ರೀಯ ಐಕ್ಯತೆಯ ಮೌಲ್ಯಗಳನ್ನು ಉತ್ತೇಜಿಸುವುದು; ಜೊತೆಗೆ ಕೆಡೆಟ್‌ಗಳಲ್ಲಿ ದೇಶಭಕ್ತಿ, ನಾಗರಿಕ ಜವಾಬ್ದಾರಿ ಮತ್ತು ರಾಷ್ಟ್ರದ ಪರಂಪರೆಯ ಬಗೆಗಿನ ಗೌರವಭಾವನೆಯನ್ನು ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಕ್ಯಾಪ್ಟನ್ ವಿಜೇಂದ್ರ ಎಂ. ಜೆ. ಮತ್ತು ಸಿಟಿಓ ಡಾ. ಹನುಮಂತರಾಜು ಆರ್. ಅವರ ಮಾರ್ಗದರ್ಶನದಲ್ಲಿ ಒಟ್ಟು 64 ಎನ್‌ಸಿಸಿ ಕೆಡೆಟ್‌ಗಳು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ನಗರದಲ್ಲಿರುವ ಪ್ರಮುಖ ಸಾರ್ವಜನಿಕ ಸ್ಮಾರಕಗಳಾದ ಮಹಾತ್ಮ ಗಾಂಧಿಯವರ ಪ್ರತಿಮೆ, ಚನ್ನಬಸಪ್ಪ ವೃತ್ತದಲ್ಲಿರುವ ಅಶೋಕ ಸ್ತಂಭ, ಕೆರಳಾಳುಸಂದ್ರ ವೃತ್ತದಲ್ಲಿರುವ ಕನ್ನಡ ರಾಜ್ಯೋತ್ಸವ ಧ್ವಜಸ್ತಂಭದ ವೇದಿಕೆಯನ್ನು ಸ್ವಚ್ಛಗೊಳಿಸುವ ಮೂಲಕ ಚಟುವಟಿಕೆಯನ್ನು ಆರಂಭಿಸಲಾಯಿತು,, ಕೆಡೆಟ್‌ಗಳು ಪ್ರತಿಮೆಗಳು ಮತ್ತು ಅವುಗಳ ಸುತ್ತಮುತ್ತಲಿನ ಪ್ರದೇಶ ಗಳನ್ನು ಸ್ವಚ್ಛಗೊಳಿಸಿ ಧೂಳು ಹಾಗೂ ಕಸವನ್ನು ತೆಗೆದು ಹಾಕಿದರು ಅಲ್ಲದೆ ಈ ಪ್ರಮುಖ ಸಾರ್ವಜನಿಕ ಸ್ಮಾರಕಗಳನ್ನು ಘನತೆ ಮತ್ತು ಗೌರವದಿಂದ ನಿರ್ವಹಿಸಲಾಗುವಂತೆ ನೋಡಿಕೊಂಡರು.

ಸಮಾಜಕ್ಕೆ ಸಮರ್ಪಣಾಭಾವದಿಂದ ಸೇವೆ ಸಲ್ಲಿಸುವುದನ್ನು ಮುಂದುವರಿಸಲು ಮತ್ತು ರಾಷ್ಟ್ರೀಯ ಏಕೀಕರಣ ಮತ್ತು ಸಮುದಾಯ ಕಲ್ಯಾಣವನ್ನು ಬಲಪಡಿಸುವ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಾಗಿ ಎಲ್ಲಾ ಕೆಡೆಟ್‌ಗಳು ಈ ವೇಳೆ ಪ್ರತಿಜ್ಞೆಯನ್ನು ಮಾಡಿದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ತಾಲ್ಲೂಕು ವಾ ಪಂಚಾಯಿತಿ ಸಭಾಂಗಣದಲ್ಲಿ ಪ್ರಬಲ ಯೋಜನೆ ಕಾರ್ಯಕ್ರಮ



ಸೂರ್ಯಪ್ರಗತಿನ್ಯೂಸ್.ಕಾಂ

ಜಿಲ್ಲಾ ಪಂಚಾಯತ್ ಚಾಮರಾಜನಗರ , ತಾಲ್ಲೂಕು ಪಂಚಾಯತ್ ಕೊಳ್ಳೇಗಾಲ , ಇವರ ಸಹಯೋಗದಲ್ಲಿ ತಾಲ್ಲೂಕು ವಾ ಪಂಚಾಯಿತಿ ಸಭಾಂಗಣದಲ್ಲಿ ಪ್ರಬಲ ಯೋಜನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು .

ಪ್ರಬಲ ಯೋಜನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಜಿಲ್ಲಾ ಸಂಯೋಜಕರಾದ ಚಿತ್ರರವರು ಮಾತನಾಡಿ ಪ್ರಬಲ ಯೋಜನೆ ಮುಖ್ಯವಾಗಿ ಅಪ್ರಾಪ್ತರ ಜೊತೆಗೆ ಇದ್ದುಕೊಂಡು ಅಪ್ರಾಪ್ತೆಯರ ಪರವಾಗಿ ಕೆಲಸ ಮಾಡುತ್ತದೆ ಅಂದರೆ 10 ರಿಂದ 19 ವರ್ಷ ಒಳಗಿನ ಹೆಣ್ಣು ಮಕ್ಕಳ ಪರವಾಗಿ ಕೆಲಸ ಮಾಡುತ್ತದೆ ನಮ್ಮ ಕೆ.ಎಚ್ ಪಿ ಐ ಸಂಸ್ಥೆಯು ಆರ್.ಡಿ ಪಿ.ಆರ್, (ರೂರಲ್ ಡವಲಪ್ಮಂಟ್ ಪಂಚಾಯತ್ ರಾಜ್, ಡಿಪಾರ್ಟ್ಮೆಂಟ್) ಗ್ರಾಮೀಣಾಭಿವೃದ್ಧಿ , ಮತ್ತು ಪಂಚಾಯತ್ ರಾಜ್ ಇಲಾಖೆಯೊಂದಿಗೆ ತಿಳುವಳಿಕೆ ಒಪ್ಪಂದ ಮಾಡಿಕೊಂಡು ಕೊಳ್ಳೇಗಾಲ ತಾಲ್ಲೂಕಿನಲ್ಲಿ ಬರುವ ಎಲ್ಲ ಗ್ರಾಮ ಪಂಚಾಯಿತಿಯಲ್ಲಿಯೂ ಕೂಡ ಪ್ರಬಲ ಕಿಶೋರಿಯರ ಸಮಿತಿಯನ್ನು ರಚನೆ ಮಾಡಿ ಕೊಂಡು ಹೆಣ್ಣುಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳಲು ಒಂದು ವೇದಿಕೆಯನ್ನು ಕಲ್ಪಿಸಿಕೊಟ್ಟು ಅವರಿಗೆ ಆತ್ಮಸ್ಥೈರ್ಯವನ್ನು ತುಂಬುವುದು ಈ ಯೋಜನೆಯ ಉದೇಶವಾಗಿದೆ, ಹದಿಹರೆಯದ ಹೆಣ್ಣು ಮಕ್ಕಳ ಉಪ ಸಮಿತಿಯನ್ನು ರಚಿಸುವ ಮೂಲಕ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಹದಿಹರೆಯದ ಹೆಣ್ಣುಮಕ್ಕಳ ಪ್ರಾತಿನಿಧ್ಯವನ್ನು ಬಾಲ ಪಡಿಸುವುದು , ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಅಸ್ತಿತ್ವದಲ್ಲಿರುವ ಉಪಸಮಿತಿಗಳಲ್ಲಿ ಹದಿಹರೆಯದ ಹೆಣ್ಣು ಮಕ್ಕಳು ಪಾಲ್ಗೊಳ್ಳುವಿಕೆಯನ್ನು ಬಲಪಡಿಸುವುದು ,

ಹೆಣ್ಣು ಮಕ್ಕಳ ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯ ಮತ್ತು ಲಿಂಗಾಧಾರಿತ ಹಿಂಸೆಗೆ ಸಂಬಂಧಿಸಿದ ಸಮಸ್ಯೆಗಳ ವಿಚಾರಗಳ ಬಗ್ಗೆ ಜಾಗೃತಿಯನ್ನು ಮೂಡಿಸುವುದು ಒಟ್ಟಾರೆ ಹದಿಹರೆಯದ ಹೆಣ್ಣು ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳು ಬಾಲ್ಯ ವಿವಾಹ ಪದ್ಧತಿಗಳು ಬಗ್ಗೆ ಅರಿವು ಮೂಡಿಸುವುದು ಹೆಣ್ಣು ಮಕ್ಕಳನ್ನು ರಕ್ಷಿಸುವುದು ಸ್ವ ರಕ್ಷಣಾ ನೀತಿಯನ್ನು ಕಲಿಸುವುದಾಗಿರುತ್ತದೆ ಎಂದರು ,

ಪ್ರಬಲ ಯೋಜನೆ ಕಾರ್ಯಕ್ರಮದಲ್ಲಿ ಸಹಾಯಕ ಲೆಕ್ಕಾಧಿಕಾರಿ ರಾಜಣ್ಣಸಹಾಯಕ ನಿರ್ದೇಶಕರು ಸಂದೇಶ್‌ತಾಲೂಕು ಕಾರ್ಯಕ್ರಮ ವ್ಯವಸ್ಥಾಪಕರು ಐ ಮನಿ, ಸರಸ್ವತಿ ಹಾಗೂ ಇನ್ನಿತರರು ಇದ್ದರು

ಸೋಲಿಗ ಸಮುದಾಯಕ್ಕೆ ಅರಣ್ಯ ಹಕ್ಕು ಮತ್ತು ಸವಲತ್ತುಗಳ ವಿತರಣೆ ಸಭೆ



ಕೊಳ್ಳೇಗಾಲ ತಾಲ್ಲೂಕಿನ ಸಿಂಗನಲ್ಲೂರು ಗ್ರಾಮದ ಕಂಚಗಳ್ಳಿ ಮತ್ತು ಪುಟ್ಟ ವೀರಮ್ಮನ ದೊಡ್ಡಿ ಸಮುದಾಯ ಭವನದಲ್ಲಿ ಹನೂರು ಮತ್ತು ಕೊಳ್ಳೇಗಾಲ ತಾಲ್ಲೂಕು ಅರಣ್ಯ ಹಕ್ಕು ಸಮಿತಿ ವತಿಯಿಂದ ಆಯೋಜಿಸಲಾಗಿದ್ದ ಸೋಲಿಗ ಸಮುದಾಯಕ್ಕೆ ಅರಣ್ಯ ಹಕ್ಕು ಮತ್ತು ಸವಲತ್ತುಗಳ ವಿತರಣೆ ಸಭೆ ಕಾರ್ಯಕ್ರಮವನ್ನು ಉದ್ಘಾಟಿಸಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ರಾಜೇಶ್ ಮಾತನಾಡಿ ಸೋಲಿಗ ಸಮುದಾಯದ ಅಭಿವೃದ್ಧಿ ಹಾಗೂ ಅರಣ್ಯ ಹಕ್ಕುಗಳಿಗೆ ಸಂಬಂಧಿಸಿದ ಸೌಲಭ್ಯಗಳನ್ನು ತಲುಪಿಸಲು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅರಣ್ಯ ಇಲಾಖೆ ಸತತವಾಗಿ ಶ್ರಮಿಸುತ್ತಿದೆ, ಅರಣ್ಯ ಹಕ್ಕುಪತ್ರ ವಿತರಣೆಯಲ್ಲಿ ರಾಜ್ಯದಲ್ಲೇ ಚಾಮರಾಜನಗರ 2 ನೇ ಜಿಲ್ಲೆಯಾಗಿದೆ ಎಂದು ಹೆಮ್ಮೆಯಿಂದ ನುಡಿದರು.

ಸಭೆಯ ಪ್ರಮುಖ ಮುಖ್ಯಾಂಶಗಳು:

ಸಮಸ್ಯೆಗಳ ಪರಿಹಾರ: ಸೋಲಿಗರ ಸಮಸ್ಯೆಗಳನ್ನು ಕೂಡಲೇ ಪರಿಶೀಲಿಸಿ, ಉಪ ವಿಭಾಗಾಧಿಕಾರಿಗಳ ಮೂಲಕ ಮೇಲಾಧಿಕಾರಿಗಳ ಗಮನಕ್ಕೆ ತಂದು ಕಾನೂನುಬದ್ಧವಾಗಿ ನ್ಯಾಯ ಒದಗಿಸಲಾಗುವುದು. ಆರ್ಥಿಕ ಸ್ವಾವಲಂಬನೆಗಾಗಿ ಅರಣ್ಯದೊಳಗೆ ಸಿಗುವ ಉತ್ಪನ್ನಗಳನ್ನು ಸಂಗ್ರಹಿಸಿ ಮಾರಾಟ ಮಾಡುವುದರಿಂದ ಆರ್ಥಿಕ ಬಲ ಹೆಚ್ಚಿಸಿಕೊಳ್ಳಲು ಅವಕಾಶವಿದೆ.

ಮದ್ಯಪಾನ ತ್ಯಜಿಸಲು ಕರೆ: ಇತ್ತೀಚಿನ ದಿನಗಳಲ್ಲಿ ಯುವಕರು ಮದ್ಯಪಾನಕ್ಕೆ ದಾಸರಾಗಿ ಆರೋಗ್ಯ ಹಾಳು ಮಾಡಿಕೊಳ್ಳುತ್ತಿದ್ದು, ಕುಟುಂಬದ ಹಿತದೃಷ್ಟಿಯಿಂದ ಪ್ರತಿಯೊಬ್ಬರೂ ಮದ್ಯಪಾನವನ್ನು ತ್ಯಜಿಸಿ ಉತ್ತಮ ಜೀವನ ರೂಪಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಈ ಕಾರ್ಯಕ್ರಮದಲ್ಲಿ ನೀರಾವರಿ ಇಲಾಖೆ ಇಂಜಿನಿಯರ್ ರಾಮಕೃಷ್ಣ, ತಾಲ್ಲೂಕು ಸೋಲಿಗರ ಸಂಘದ ಅಧ್ಯಕ್ಷ ರಂಗೇಗೌಡ, ಪಿಡಿಒ ಮಹೇಂದ್ರ, ಉಪ ವಲಯ ಅರಣ್ಯಾಧಿಕಾರಿ ಭಾನುಪ್ರಕಾಶ್, ಮಹೇಶ್ ಬಿ.ಎಂ, ಹಾಸ್ಟೆಲ್ ವಾರ್ಡನ್ ಪ್ರಭುಸ್ವಾಮಿ, ಅಂಗನವಾಡಿ ಕಾರ್ಯಕರ್ತೆಯರು ಸೇರಿದಂತೆ ಸ್ಥಳೀಯ ಸೋಲಿಗ ಬಂಧುಗಳು ಉಪಸ್ಥಿತರಿದ್ದರು.

ಎಸ್‌ಐಆರ್ ಜಾಗೃತಿಗೆ ಜನ ಪ್ರತಿನಿಧಿಗಳ ಸಹಕಾರ ಅಗತ್ಯ



ಸೂರ್ಯಪ್ರಗತಿನ್ಯೂಸ್.ಕಾಂ

ಹುಳಿಯಾರು : ಮತದಾರರ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಅತ್ಯಂತ ಅಗತ್ಯವಾಗಿದ್ದು, ಜನಪ್ರತಿನಿಧಿಗಳು ಹಾಗೂ ಮತದಾರರು ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಹಾಲಪ್ಪ ಪ್ರತಿಷ್ಠಾನದ ಅಧ್ಯಕ್ಷರಾದ ಮುರಳೀಧರ ಹಾಲಪ್ಪ ಕರೆ ನೀಡಿದರು.

ಪಟ್ಟಣದ ರಾಮ್‌ಗೋಪಾಲ್ ಸರ್ಕಲ್ ಬಳಿ ಆಯೋಜಿಸಿದ್ದ ಎಸ್‌ಐಆರ್ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಸ್‌ಐಆರ್ ಪ್ರಕ್ರಿಯೆ ಹಲವು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಯಶಸ್ವಿಯಾಗಿ ನಡೆಯುತ್ತಿದ್ದು, ಮತದಾರರ ಹಕ್ಕು ಮತ್ತು ದಾಖಲೆಗಳನ್ನು ಸುರಕ್ಷಿತವಾಗಿಡಲು ಇದು ಮಹತ್ವದ ಅಭಿಯಾನವಾಗಿದೆ ಎಂದರು.

ಸಾಮಾನ್ಯ ಜನರಲ್ಲಿ ಎಸ್‌ಐಆರ್ ಬಗ್ಗೆ ಅರಿವು ಕಡಿಮೆಯಿದ್ದು, ಸರಕಾರೇತರ ಸಂಘಟನೆಗಳು ಹಾಗೂ ವಿವಿಧ ಸಂಘ – ಸಂಸ್ಥೆಗಳ ಸಹಕಾರದಿಂದ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಮತದಾರರಿಗೆ ಎಸ್‌ಐಆರ್ ಕುರಿತು ಇರುವ ಗೊಂದಲಗಳಿಗೆ ಉತ್ತರ ನೀಡಲು ಹಾಗೂ ದಾಖಲೆಗಳ ಮ್ಯಾಪಿಂಗ್, ತಿದ್ದುಪಡಿ ಸೇರಿದಂತೆ ತಾಂತ್ರಿಕ ನೆರವು ಒದಗಿಸಲು ಕೆಪಿಸಿಸಿ ವತಿಯಿಂದ ತಾಂತ್ರಿಕ ತಂಡ ಕಾರ್ಯನಿರ್ವಹಿಸಲು ಆಗಮಿಸಿದೆ. ಅಗತ್ಯವಿದ್ದರೆ ಚಿಕ್ಕನಾಯಕನಹಳ್ಳಿ ಕ್ಷೇತ್ರದ ಎಲ್ಲಾ ಹೋಬಳಿಗಳ ಮತದಾರರಿಗೆ ನೆರವು ನೀಡಲಾಗುವುದು ಎಂದು ಹೇಳಿದರು.

ಜನರು ತಪ್ಪು ಮಾಹಿತಿ ನೀಡುವುದು ಅಥವಾ ಎಸ್‌ಐಆರ್ ಪ್ರಕ್ರಿಯೆಯನ್ನು ನಿರ್ಲಕ್ಷಿಸುವುದು ಮುಂದಿನ ದಿನಗಳಲ್ಲಿ ಸಮಸ್ಯೆಗೆ ಕಾರಣವಾಗಬಹುದು. ಮತದಾನದ ಹಕ್ಕು ಸೇರಿದಂತೆ ಸರಕಾರದ ವಿವಿಧ ಸೌಲಭ್ಯಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಪ್ರತಿಯೊಬ್ಬರೂ ಎಚ್ಚರಿಕೆಯಿಂದ ಈ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು ಎಂದು ಅವರು ಮನವಿ ಮಾಡಿದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಮಾಜಿ ಶಾಸಕ ಕೆ.ಎಸ್. ಕಿರಣ್ ಕುಮಾರ್, ಮತದಾರರಲ್ಲಿ ಎಸ್‌ಐಆರ್ ಕುರಿತು ಇನ್ನೂ ಹಲವು ಗೊಂದಲಗಳಿದ್ದು, ಅವುಗಳನ್ನು ನಿವಾರಿಸುವ ಉದ್ದೇಶದಿಂದ ಹಾಲಪ್ಪ ಪ್ರತಿಷ್ಠಾನದ ತಾಂತ್ರಿಕ ತಂಡದ ಸಹಯೋಗದಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಕಳೆದ ಒಂದು ತಿಂಗಳಿನಿಂದ ಎಸ್‌ಐಆರ್ ಪ್ರಕ್ರಿಯೆ ನಡೆಯುತ್ತಿದ್ದು, ಕ್ಷೇತ್ರದ ಎಲ್ಲಾ ಬೂತ್‌ಗಳಲ್ಲಿ ಪಕ್ಷದ ವತಿಯಿಂದ ಬಿಎಲ್‌ಎ–2ಗಳನ್ನು ನೇಮಿಸಲಾಗಿದೆ. ಎಣಿಕೆ ನಮೂನೆಗಳ ವಿತರಣೆ ಈಗಾಗಲೇ ಪೂರ್ಣಗೊಂಡಿದ್ದು, ದಾಖಲೆಗಳಲ್ಲಿ ಕಂಡುಬಂದಿರುವ ಸಣ್ಣಪುಟ್ಟ ಲೋಪದೋಷಗಳನ್ನು ತಾಂತ್ರಿಕ ತಂಡದ ನೆರವಿನಿಂದ ಸರಿಪಡಿಸಿಕೊಳ್ಳಬಹುದು ಎಂದು ತಿಳಿಸಿದರು.

2002ರ ಮತದಾರರ ಪಟ್ಟಿಗೆ ಸಂಬಂಧಿಸಿದ ದಾಖಲೆಗಳು, ಹೆಸರು, ವಿಳಾಸ ಅಥವಾ ಅಕ್ಷರದೋಷ ಸೇರಿದಂತೆ ವಿವಿಧ ಸಮಸ್ಯೆಗಳ ಪರಿಹಾರಕ್ಕಾಗಿ ತಜ್ಞರ ತಂಡ ನೆರವು ನೀಡಲಿದೆ. ಮತದಾರರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಎಸ್‌ಐಆರ್ ಪ್ರಕ್ರಿಯೆಯಿಂದ ರಾಜ್ಯದಲ್ಲಿ ಗಣನೀಯ ಸಂಖ್ಯೆಯ ಮತದಾರರ ಹೆಸರುಗಳು ಪಟ್ಟಿಯಿಂದ ಹೊರಗುಳಿಯುವ ಸಾಧ್ಯತೆ ಕುರಿತು ಆತಂಕ ವ್ಯಕ್ತಪಡಿಸಿದ ಅವರು, ಮುಂದಿನ ಚುನಾವಣೆಗಳ ಮೇಲೆ ಇದು ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಪ್ರತಿಯೊಬ್ಬ ಮತದಾರರೂ ಜಾಗೃತಿಯಿಂದ ಅಗತ್ಯ ದಾಖಲೆಗಳನ್ನು ಪರಿಶೀಲಿಸಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು ಎಂದರು. ಈ ಸಂದರ್ಭದಲ್ಲಿ ಹುಳಿಯಾರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ಟಿ. ಚಿಕ್ಕಣ್ಣ, ಪಟ್ಟಣ ಪಂಚಾಯಿತಿ ಸದಸ್ಯರಾದ ಸಿದ್ದಿಕ್, ಜುಬೇರ್, ಚನ್ನಬಸವಯ್ಯ, ಶಿವಶಂಕರ್, ದೇವರಾಜು, ಬಸವರಾಜು, ನಾಗರಾಜು ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಮೂರು ನೀರಾವರಿ ಯೋಜನೆಗಳಿಂದ ತಾಲ್ಲೂಕಿಗೆ ನೀರು ಹರಿಯಲಿದೆ

ಸೂರ್ಯಪ್ರಗತಿನ್ಯೂಸ್.ಕಾಂ



ಚಿಕ್ಕನಾಯಕನಹಳ್ಳಿ:–ತಾಲ್ಲೂಕಿನ ಸಮಗ್ರ ನೀರಾವರಿ ಯೋಜನೆಗಳಾದ ಎತ್ತಿನಹೊಳೆ, ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಹೇಮಾವತಿ ನೀರಾವರಿ ಯೋಜನೆಗಳಿಂದ ಒಟ್ಟು 143 ಕೆರೆಗಳಿಗೆ ಕುಡಿಯುವ ನೀರಿನ ಉದ್ದೇಶಕ್ಕೆ ಹರಿಸಲಾಗುವುದು ಎಂದು ಶಾಸಕ ಸಿ.ಬಿ.ಸುರೇಶ್‌ಬಾಬು ತಿಳಿಸಿದರು.

ಪಟ್ಟಣದ ತಾಲ್ಲೂಕು ಆಡಳಿತ ಸೌಧದ ಮುಂಭಾಗದಲ್ಲಿ ನಡೆಯುತ್ತಿರುವ 5ನೇ ದಿನದ ನೀರಾವರಿ ಹೋರಾಟದ ಸತ್ಯಾಗ್ರಹದ ಹೋರಾಟಗಾರರ ಬೇಡಿಕೆಯಂತೆ ನಮ್ಮ ತಾಲ್ಲೂಕಿನ ಮೂರು ಯೋಜನೆಗಳಿಂದ ಎಷ್ಟು ನೀರು ಹಂಚಿಕೆಯಾಗಿದೆ, ಎಷ್ಟು ಕೆರೆಗಳಿಗೆ ಎಂಬ ಮಾಹಿತಿಯನ್ನು ತಿಳಿಸಿದ ಅವರು ಎತ್ತಿನ ಹೊಳೆ ಯೋಜನೆಯಿಂದ ಒಟ್ಟು 1.097ಟಿಎಂಸಿ ನೀರು ಹಂಚಿಕೆಯಾಗಿದ್ದು ಇದರಲ್ಲಿ 103ಕೆರೆಗಳನ್ನು ತುಂಬಿಸಲು 0.75 ಟಿಎಂಸಿ ಹಾಗೂ 0.347ಟಿಎಂಸಿ ಕುಡಿಯುವ ನೀರಿಗಾಗಿ ಹಂಚಿಕೆ ಮಾಡಲಾಗಿದೆ ಈ ಕಾಮಗಾರಿಯು ತಾಲ್ಲೂಕಿನಲ್ಲಿ ಒಟ್ಟು 12.42ಕಿ.ಮೀ ಇದ್ದು ಇದರಲ್ಲಿ ಈಗಾಗಲೇ 10.89ಕಿ.ಮೀ ಆಗಿದ್ದು ಇನ್ನು 1.53ಕಿ.ಮೀ ಕಾಮಗಾರಿ ಪ್ರಗತಿಯಲ್ಲಿದೆ, ಈ ಯೋಜನೆಗೆ ಒಟ್ಟು 11ಹಳ್ಳಿಯು ಒಳಪಟ್ಟಿದ್ದು ಅಗತ್ಯವಾಗಿರುವ ಭೂಸ್ವಾದೀನ ಪ್ರಕ್ರಿಯಲ್ಲಿ ಅವಾರ್ಡ್ ಎಲ್ಲಾ ಆಗಿದೆ. ಇದರೊಂದಿಗೆ ಭದ್ರಾಮೇಲ್ದಾಂಡೆ ಯೋಜನೆಯಲ್ಲಿ ಒಟ್ಟು 1.58ಟಿಎಂಸಿ ನೀರು ಹಂಚಿಕೆಯಾಗಿದ್ದು ಇದರಲ್ಲಿ 14ಕೆರೆಗಳನ್ನು ತುಂಬಿಸಲು 1.29ಟಿಎಂಸಿ ಹಾಗೂ ಒಟ್ಟು 4657ಹೆಕ್ಟರ್‌ಗೆ 0.295ಟಿಎಂಸಿ ನೀರು ಹಂಚಿಕೆಯಾಗಿದೆ ಈ ಕಾಮಗಾರಿಯು ಒಟ್ಟು 26.74ಕಿ.ಮೀ ಉದ್ದವಿದ್ದು ಇದರಲ್ಲಿ 10.50ಕಿ.ಮೀ ಕಾಮಗಾರಿ ಮುಗಿದಿದ್ದು ಇನ್ನು 7.20ಕಿ.ಮೀ ಕಾಮಗಾರಿ ನಡೆಯುತ್ತಿದ್ದು ಇನ್ನು 9.05ಕಿ.ಮೀ ಕಾಮಗಾರಿ ಪ್ರಾರಂಭವಾಗಬೇಕಿದೆ ಇದರಲ್ಲಿ ಒಟ್ಟು 12 ಹಳ್ಳಿಗಳ ಒಟ್ಟು 11ಹಳ್ಳಿಗಳ ವ್ಯಾಪ್ತಿಯ ಜಮೀನಿಗೆ ಅವಾರ್ಡ್ ಆಗಿದ್ದು ಇನ್ನು 01 ಭಟ್ಟರಹಳ್ಳಿ ಅವಾರ್ಡ್ ಆಗಬೇಕಿದೆ ಇದರೊಂದಿಗೆ ಹೇಮಾವತಿ ಕಾಮಗಾರಿಯಲ್ಲಿ ಒಟ್ಟು 0.80ಟಿಎಂಸಿ ನೀರು ಹಂಚಿಕೆಯಾಗಿದ್ದು ಒಟ್ಟು 26ಕೆರೆಗಳಲ್ಲಿ 4 ಕೆರೆಗಳು ಏತ ನೀರಾವರಿ ಹಾಗೂ 24ಕೆರೆಗಳಿಗೆ ಗುರುತ್ವಾಕರ್ಷಣೆಯ ಮೂಲಕ ಹರಿಸಲಾಗುವುದು ಈ ಯೋಜನೆಗಳು ನಮ್ಮ ಕ್ಷೇತ್ರದ ರೈತರಿಗೆ ಅನುಕೂಲವಾಗಲಿವೆ ಅದರಂತೆ ಎಲ್ಲಾ ರೈತರು ಸಹಕರಿಸ ಬೇಕು ನಿಮ್ಮ ಎಲ್ಲಾ ಬೇಡಿಕೆಗಳಿಗೂ ನಿಮ್ಮ ಹೋರಾಟಕ್ಕೆ ನಮ್ಮ ಬೆಂಬಲವಿದೆ ಕೇವಲ ಈ ನೀರಾವರಿ ಯೋಜನೆಯಷ್ಟೇ ಅಲ್ಲದೇ ತಾಲ್ಲೂಕಿನ ಅಭಿವೃದ್ಧಿಗೆ ಕೆಲಸಗಳನ್ನು ಮಾಡಬೇಕು ಏನು ಮಾಡಿದರೆ ಸೂಕ್ತ ಎಂಬುದರ ಬಗ್ಗೆ ಎಲ್ಲರೂ ಒಟ್ಟಾಗಿ ಯೋಜನೆ ರೂಪಿಸಿ ಅದಕ್ಕೆ ಅಗತ್ಯವಿರುವಂತಹ ಅಧಿಕಾರಿಗಳನ್ನು ಮಂತ್ರಿಗಳನ್ನು ಸ್ಥಳಕ್ಕೆ ಕರೆಯಿಸಿ ತೀರ್ಮಾನ ಮಾಡೋಣ ಈ ಹೇಮಾವತಿ ಕಾಮಗಾರಿಯನ್ನು ಪೂರ್ಣಗೆ ಳಿಸುವುದು ನನ್ನ ಜವಾಬ್ದಾರಿ ಇನ್ನಾದರು ಹೋರಾಟ ಅಂತ್ಯಗೊಳಿಸಿ ಎಂದು ಮನವಿ ಮಾಡಿದರು.

ಶಾಸಕರ ಮನವಿ ಸ್ಪಂದಿಸದ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಮಧು ಮಾತನಾಡಿ ಈ ನೀರಾವರಿ ಯೋಜನೆಗಾಗಿ ನಿಮ್ಮ ಜವಾಬ್ದಾರಿ ಹಾಗೂ ನೀವು ಮಾಡಿರುವಂತಹ ಕೆಲಸಗಳು ನಮಗೆ ತಿಳಿದಿವೆ ನಾವು ನಿಮ್ಮೊಂದಿಗೆ ಇದ್ದೇವೆ ಅದರೆ ಈ ಯೋಜನೆಯ ನೀರಾವರಿ ಚೀಫ್ ಇಂಜಿನಿಯರ್ ಈ ಪ್ರತಿಭಟನೆಯ ಸ್ಥಳಕ್ಕೆ ಬರಬೇಕು ಎಂದು ಪಟ್ಟು ಹಿಡಿದರು.

ಇದಕ್ಕೆ ಸ್ಪಂದಿಸಿದ ಶಾಸಕರು ಇಂದು ಸಂಜೆಯ ವೇಳೆಗೆ ಇಂಜನಿಯರ್‌ರನ್ನು ಕರೆಯಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಭೂಸ್ವಾದೀನ ಇಲಾಖೆಯ ಎಸ್‌ಎಲ್‌ಒ ಮಂಜುಳಾ, ತಹಸೀಲ್ದಾರ್ ಮಮತಾ ಎಂ, ಎಇಇ ಪ್ರಭಾಕರ್, ಮಾಜಿ ಜಿ.ಪಂ.ಸದಸ್ಯ ರಾಮಚಂದ್ರಯ್ಯ, ಡಿಸಿಸಿ ಬ್ಯಾಂಕ್ ನಿರ್ದೇಶಕ ಸಿಂಗದಹಳ್ಳಿರಾಜ್‌ಕುಮಾರ್ ತರಬೇನಹಳ್ಳಿ ಷಡಾಕ್ಷರಿ, ಗೋವಿಂದಪ್ಪ ಸೇರಿದಂತೆ ಇತರರು ಇದ್ದರು.

'ಬರ ನಿರ್ವಹಣೆಗೆ ರಾಜ್ಯ ಸರ್ಕಾರ 10 ಸಾ. ಕೋಟಿ ಬಿಡುಗಡೆ ಮಾಡಲಿ'

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು : ರಾಜ್ಯದಲ್ಲಿ ತೀವ್ರ ಬರಗಾಲ ಎದುರಾಗಿದ್ದು ರಾಜ್ಯ ಸರ್ಕಾರ ತುರ್ತು ಪರಿಹಾರಕ್ಕಾಗಿ ಹತ್ತು ಸಾವಿರ ಕೋಟಿ ರೂ. ಬಿಡುಗಡೆ ಮಾಡಬೇಕು. ಸರ್ಕಾರ ರೈತರ ಮನೆ ಬಾಗಿಲಿಗೆ ಹೋಗಿ ಅವರ ಸಂಕಷ್ಟ ಪರಿಹರಿಸಬೇಕು ಎಂದು ತುಮಕೂರು ಗ್ರಾಮಾಂತರ ಕ್ಷೇತ್ರ ಶಾಸಕ ಬಿ. ಸುರೇಶ್‌ಗೌಡರು ಒತ್ತಾಯಿಸಿದರು.

ಸೋಮವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬರ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಒಂದು ರೂಪಾಯಿಯನ್ನೂ ಬಿಡುಗಡೆ ಮಾಡದೆ, ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ ಎಂದು ಮಂತ್ರಿಗಳು ಕೇಂದ್ರದ ಮೇಲೆ ಗೂಬೆ ಕೂರಿಸುತ್ತಿದೆ ಹೊರತು ತಮ್ಮ ಸರ್ಕಾರದ ಜವಾಬ್ದಾರಿಯನ್ನು ನಿರ್ವಹಿಸುತ್ತಿಲ್ಲ ಎಂದು ಟೀಕಿಸಿದರು.

ರಾಜ್ಯದ 240 ತಾಲ್ಲೂಕುಗಳ ಪೈಕಿ 141 ತಾಲ್ಲೂಕುಗಳಲ್ಲಿ ಬರ ಬಿದ್ದಿದೆ. ತುಮಕೂರು ಸೇರಿದಂತೆ 31 ಜಿಲ್ಲೆಗಳಲ್ಲಿ 24 ಜಿಲ್ಲೆಗಳು ಬರಪೀಡಿತವಾಗಿವೆ. ಒಟ್ಟು ಶೇಕಡ 42 ರಷ್ಟು ಮಳೆ ಕೊರತೆ ಇದೆ ಎಂದು ಅಂದಾಜು ಮಾಡಲಾಗಿದೆ. ಈಚಿನ ವರ್ಷಗಳಲ್ಲಿ ಕರ್ನಾಟಕ ಇಂಥ ಭೀಕರ ಬರದ ಸ್ಥಿತಿಯನ್ನು ಎದುರಿಸಿರಲಿಲ್ಲ. ಇಂಥ ಗಂಭೀರ ಸ್ಥಿತಿಯನ್ನು ಎದುರಿಸಲು ರಾಜ್ಯ ಸರ್ಕಾರ ತಕ್ಷಣ ಕನಿಷ್ಠ 10,000 ಕೋಟಿ ರೂಪಾಯಿ ಬಿಡುಗಡೆ ಮಾಡಬೇಕು. ಸಂಕಷ್ಟದಲ್ಲಿ ರೈತರಿಗೆ ಮಿಡಿದು ತನಗೆ ಹೃದಯ ಇದೆ ಎಂದು ತೋರಿಸಬೇಕು. ಮಳೆಯ ಕೊರತೆಯಿಂದಾಗಿ ಮುಂಗಾರು ಬೆಳೆ ಬಿತ್ತನೆ ಹಿಂದೆ ಬಿದ್ದಿದೆ ಎಂದರು.

ಮೇವು ಬ್ಯಾಂಕ್ ಸ್ಥಾಪಿಸಿ:

ಕೃಷಿ ಬೆಳೆಯಕಠಿಣಸ್ಥಿತಿ ಒಂದು ಕಡೆಯಾದರೆ ಮೇವಿನ ಕೊರತೆ ಕಾಣಿಸಿಕೊಂಡು ಜಾನುವಾರುಗಳಿಗೆ ತೀವ್ರ ಸಂಕಷ್ಟ ಎದುರಾಗುವ ಸ್ಥಿತಿ ಇದೆ. ಕೂಡಲೇ ಮೇವು ಬ್ಯಾಂಕ್ ಸ್ಥಾಪನೆ ಮಾಡಬೇಕು. ಇಂಥ ಸ್ಥಿತಿಯನ್ನು ಎದುರಿಸಬೇಕಾದ ಸರ್ಕಾರ ಸಂಪೂರ್ಣ ಸನ್ನದ್ಧ ಸ್ಥಿತಿಯಲ್ಲಿ ಇರಬೇಕಿತ್ತು. ಆದರೆ, ಕರ್ನಾಟಕದಲ್ಲಿ ಸರ್ಕಾರವೇ ಇಲ್ಲ. ಈಗ ರಾಜ್ಯದಲ್ಲಿ ಕಂದಾಯ ಸಚಿವರು ಮಾತ್ರ ಇದಾರೆ. ಕೃಷಿ, ತೋಟಗಾರಿಕಾ, ಜಲಸಂಪನ್ಮೂಲ ಸಚಿವರೇ ಇಲ್ಲ. ಕೃಷಿ ಸಂಬಂಧಿ ಸಚಿವರು ರಾಜ್ಯಾದ್ಯಂತ ಪ್ರವಾಸ ಮಾಡಿ ರೈತರನ್ನು ಭೇಟಿ ಮಾಡಿ ಬರಗಾಲದ ಸ್ಥಿತಿಯನ್ನು ಈಗಾಗಲೇ ಅಂದಾಜು ಮಾಡಬೇಕಿತ್ತು. ಈಗ ಸಚಿವರಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದವರು ಇಲಾಖೆಯನ್ನು ಅರ್ಥ ಮಾಡಿಕೊಳ್ಳಲು ಕನಿಷ್ಠ ಮೂರು ತಿಂಗಳಾದರೂ ಬೇಕಾಗುತ್ತದೆ ಇಂಥ ಸ್ಥಿತಿಯಲ್ಲಿ ಕೃಷಿಕರನ್ನು ಕಾಪಾಡುವವರು ಯಾರು? ಎಂದು ಪ್ರಶ್ನಿಸಿದರು.

ರಾಜ್ಯದ ಸಚಿವರ ತಂಡ ಹೋಗಿ ಅಧ್ಯಯನ ಮಾಡಿ

ಇಂಥ ಪತ್ರ ಬರೆಯಬೇಕು. ನಾವೇ ಪೂರ್ವ ಸಿದ್ಧತೆ ಮಾಡಿಕೊಳ್ಳದೇ ಇದ್ದರೆ ಕೇಂದ್ರ ಸರ್ಕಾರ ನಮ್ಮ ನೆರವಿಗೆ ಏಕೆ ಬರುತ್ತದೆ? ಆಮೇಲೆ ಕೇಂದ್ರ ಸಹಾಯ ಮಾಡಲಿಲ್ಲ ಎಂದು ದೂರುವುದಕ್ಕೆ ರಾಜ್ಯ ಸರ್ಕಾರ ಈಗಲೇ ಸಿದ್ಧತೆ ಮಾಡಿಕೊಳ್ಳುತ್ತಿದೆ ಎನ್ನುವುದು ಸ್ಪಷ್ಟವಾಗಿದೆ. ಇದನ್ನು ರಾಜ್ಯ ಬಿಜೆಪಿ ನಾಯಕರು ಸಹಿಸುವುದಿಲ್ಲ ಎಂದರು.

ಹೈಕಮಾಂಡ್ ಬಾಗಿಲಲ್ಲಿ ಕಾಂಗ್ರೆಸ್ ನಾಯಕರು:

ರಾಜ್ಯದಲ್ಲಿ ಭೀಕರ ಬರಸ್ಥಿತಿ ನಿರ್ವಹಣೆ ಮಾಡಬೇಕಾದ ರಾಜ್ಯ ಸರ್ಕಾರದ ನಾಯಕರು ಸಚಿವ ಸಂಪುಟ ವಿಸ್ತರಣೆಗಾಗಿ ಹೈಕಮಾಂಡ್ ಬಾಗಿಲು ಕಾಯುತ್ತಿದೆ. ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರು ರಾಹುಲ್ ಗಾಂಧಿ ಮನೆಬಾಗಿಲು ಕಾಯುವ ಪರಿಸ್ಥಿತಿಗೆ ತಂದಿರುವುದು ರಾಜ್ಯದ 7 ಕೋಟಿ ಜನರಿಗೆ ಮಾಡಿದ ಅವಮಾನ ಎಂದು ಸುರೇಶ್‌ಗೌಡರು ಟೀಕಿಸಿದರು.

ವಿಜಯೇಂದ್ರ ಬರ ಅಧ್ಯಯನ ಪ್ರವಾಸ:

ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಇದೇ 4ರಂದು ಮಂಗಳವಾರ ತುಮಕೂರು ಜಿಲ್ಲೆಯಲ್ಲಿ ಬರ ಅಧ್ಯಯನ ಪ್ರವಾಸ ಕೈಗೊಂಡಿದ್ದು, ಪರಿಸ್ಥಿತಿ ಅಧ್ಯಯ, ರೈತರೊಡನೆ ಸಂವಾದ ನಡೆಸಲಿದ್ದಾರೆ . ನಾನು ಕೂಡ ಪ್ರವಾಸದಲ್ಲಿ ಇರುತ್ತೇನೆ. ತಾವೂ ಪ್ರವಾಸದಲ್ಲಿ ಇರುವುದಾಗಿ ಹೇಳಿದರು. ರಾಜ್ಯ ಸರ್ಕಾರ ಬರಗಾಲ ಸ್ಥಿತಿ ಎದುರಿಸಲು ತಾನು ಏನು ಮಾಡಬೇಕು ಎಂಬ ಕುರಿತು ಇದುವರೆಗೆ ಯೋಚನೆ ಮಾಡಿಯೇ ಇಲ್ಲ. ತಾನು ಎಷ್ಟು ಹಣ ಬಿಡುಗಡೆ ಮಾಡುತ್ತೇನೆ ಎಂದು ಇದುವರೆಗೆ ಹೇಳಿಲ್ಲ. ಇದು ಹೃದಯವೇ ಇಲ್ಲದ ಸರ್ಕಾರ ಎಂದು ಸುರೇಶ್‌ಗೌಡ ಹೇಳಿದರು.

ಹೆಸರು ಬದಲಾವಣೆ

ತುಮಕೂರು ಜಿಲ್ಲೆ & ತಾ. ಊರುಕೆರೆ ಗ್ರಾಮದ ವಾಸಿಯಾದ ಉಮೇಶ್ ಓ.ಬಿ. ಬಿನ್ ಬಸವರಾಜು ಆದ ನಾನು ನನ್ನ ಮಗ ಮೈನರ್ ಆಗಿದ್ದು, ನನ್ನ ಮಗನ ಹೆಸರನ್ನು ಲಕ್ಷಿತ್ ಯು ಅಲಿಯಾಸ್ ಲಖಿತ್ ಯು ಎಂಬುದರ ಬದಲಾಗಿ ಲಖಿತ್ ಯು ಎಂದು ದಿ: 22.7.2026ರಂದು ತುಮಕೂರು ನೋಟರಿ ಹೆಚ್.ಜೆ. ವಿಜಯಲಕ್ಷ್ಮಮ್ಮ ಅವರ ಮುಂದೆ ಪ್ರಮಾಣೀಕರಿಸಿ ಬದಲಾಯಿಸಿರುತ್ತೇನೆ. ಇನ್ನೂ ಮುಂದೆ ನನ್ನ ಮಗನ ಎಲ್ಲಾ ವ್ಯವಹಾರಗಳು ಲಖಿತ್ ಯು ಎಂಬ ಹೆಸರಿನಲ್ಲಿರುತ್ತದೆ.

ಸತ್ಯ–ಶುದ್ಧ ಕಾಯಕದ ಮುಖೇನ ಪಡೆದ ಅರಿವೇ ಗುರುವಾಗುತ್ತದೆ

ಸೂರ್ಯಪ್ರಗತಿನ್ಯೂಸ್.ಕಾಂ



ತಿಪಟೂರು : ನಗರದ ಸಿಡ್ಲೇಹಳ್ಳಿ ಸಂಸ್ಥಾನ ಮಠ, ಶ್ರೀ ಗುರುಕುಲಾನಂದಾಶ್ರಮದಲ್ಲಿ ಆಯೋಜಿತವಾಗಿದ್ದ 355ನೇ ಬೆಳದಿಂಗಳ ಶರಣಧರ್ಮ ಚಿಂತನಾಗೋಷ್ಠಿಯ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಸದ್ಗುರು ಶ್ರೀ ಇಮ್ಮಡಿ ಕರಿಸಬಸವದೇಶಿಕೇಂದ್ರ ಸ್ವಾಮಿಗಳವರು 12ನೇ ಶತಮಾನದ ಆ ದಿನಗಳಲ್ಲೇ "ಹುಟ್ಟಿನಿಂದ ಯಾರೂ ಶ್ರೇಷ್ಠರಲ್ಲ ತಮ್ಮ ಸತ್ಯ ಶುದ್ಧ ಕಾಯಕದ ಮುಖೇನ ಸನ್ಮಾರ್ಗದಲ್ಲಿ ಬದುಕಿ ಪಡೆದ ಅರಿವೇ ಗುರುವಾಗಿ ಭವ–ಬಂಧನದಿಂದ ಮುಕ್ತರಾಗಿ, ಸಾಮಾನ್ಯ ಮಾನವನೂ ಮಹಾದೇವನಾಗ ಬಲ್ಲ ಎಂದು ಸಾರಿದ ಬಸವಾದಿ ಶರಣರ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ" ಎಂದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿ ಬೆಟ್ಟಯ್ಯ ನಾಗರಾಜು "ಶರಣರು ಕಟ್ಟ ಬಯಸಿದ ಸಮಾಜ" ಎಂಬ ವಿಷಯದ ಕುರಿತು ಮಾತನಾಡಿ ಶಿವಶರಣರು ಕಾಯಕ ಮತ್ತುದಾಸೋಹ ಎಂಬ ತತ್ವಗಳ ಹಿನ್ನಲೆಯಲ್ಲಿ ಮೇಲು–ಕೀಳಿಲ್ಲದ, ಜಾತಿ ಮತ, ಪಂಥ ಬೇಧವಿಲ್ಲದ ಸಮ ಸಮಾಜ ನಿರ್ಮಾಣದೆಡೆಗೆ ಗಟ್ಟಿ ಹೆಜ್ಜೆಗಳನ್ನಿಟ್ಟಿದ್ದರು. ಸ್ವಾನುಭಾವದ ವಚನಗಳ ಮೂಲಕ ವೈಚಾರಿಕ ಅರಿವಿನ ಜ್ಯೋತಿಯಲ್ಲಿ ಬೆಳಗಿ, ಸ್ತ್ರೀಯರಿಗೂ ಅಭಿವ್ಯಕ್ತಿ ಸ್ವತಂತ್ರ ನೀಡಿ ಸಮಾಜದ ಮುಖ್ಯ ವಾಹಿನಿಗೆ ತರುವ ಅಸಾಮಾನ್ಯ ಪ್ರಯತ್ನಗಳನ್ನು ಆ ದಿನಗಳಲ್ಲೇ ಜಾರಿಯಲ್ಲಿತಂದು ಕರ್ನಾಟಕ ರಾಜ್ಯದಲ್ಲಿಒಂದು ಸಾಮಾಜಿಕ ಕ್ರಾಂತಿಯನ್ನು ನಿರ್ಮಿಸಿದ್ದು ಇಂದು ಇತಿಹಾಸ. ಶರಣರ ಆ ಚಿಂತನೆಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಹಲವಾರು ಶರಣರ ಬದುಕು ವಚನಗಳ ಮೂಲಕ ಉಪನ್ಯಾಸ ನೀಡಿದರು.

ಕಾರ್ಯಕ್ರಮವನ್ನು ಹುಲ್ಲು ಕಟ್ಟೆ ಲಿಂಗೈಕ್ಯ ಬಸವೇಗೌಡರ ಸ್ಮರಣಾರ್ಥ ಶ್ರೀ ರಾಜೇಶ್ವರ ಕುಟುಂಬ ದವರು ಆಯೋಜಿಸಿದ್ದರು. ಅತಿಹೆಚ್ಚು ಅಂಕಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಲಿಂಗೈಕ್ಯ ಮುಖ್ಯ ಶಿಕ್ಷಕಿ ಶ್ರೀಮತಿ ಕೆ.ಎನ್. ನಾಗರತ್ನಮ್ಮ ಸ್ಮರಣಾರ್ಥ ವಿದ್ಯಾರ್ಥಿ ವೇತನವನ್ನು ನಿ॥ ಅಸಿಸ್ಟೆಂಟ್ ಸಬ್ ಇನ್ಸಪೆಕ್ಟರ್ ಮಹಾದೇವಯ್ಯ ವಿತರಿಸಿದರು. ಗುರುಪೂರ್ಣಿಮೆ ಅಂಗವಾಗಿ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ, ವರ್ತಕರು, ಎಸ್.ಬಿ.ಐ ಬ್ಯಾಂಕ್‌ನ ಶ್ರೀ ಮಲ್ಲಿಕಾರ್ಜುನ ನವಲೂರ್ ಹಾಗೂ ಹಿರಿಯ ವಿದ್ಯಾರ್ಥಿಗಳು ಗುರುವಂದನೆ ಅರ್ಪಿಸಿದರು. ಗುರುಕುಲದ ವಿದ್ಯಾರ್ಥಿ ಚಿ॥ ಮೋಹಕ ವಿಭುವನ್ ಪ್ರಾರ್ಥಿಸಿದರು, ಪಾಠಶಾಲೆಯ ವಿದ್ಯಾರ್ಥಿನಿಯರು ವಚನ ನೃತ್ಯ ಪ್ರದರ್ಶನ ನೀಡಿದರು. ನಿವೃತ್ತ ಪ್ರಾಂಶುಪಾಲ ವಿ.ಬಿ. ಮ. ಹಾಲಿಂಗಪ್ಪ ಸ್ವಾಗತಿಸಿ, ಸಂಯೋಜಕಡಾ॥ ಎಲ್. ಎಂ. ವೆಂಕಟೇಶ್ ನಿರೂಪಿಸಿ, ಪಿ.ಆರ್.ಓ ಭರತ್‌ಜೆ.ಈ ವಂದಿಸಿದರು. ಶ್ರೀಮಠದ ಆಡಳಿತ ಮಂಡಳಿ ಹಾಗೂ ಭಕ್ತಾದಿಗಳು ಪಾಲ್ಗೊಂಡಿದ್ದರು.

ತುಮಕೂರು ನಗರಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು – 572 103–ದೂರವಾಣಿ : 0816–2272280

email:tundatmk2009@yashoo.co.in;website:tumkuru.uda.gov.in

ಸಂಖ್ಯೆ: TUDA-LBPAS-00243/2026-27/CLU ದಿನಾಂಕ:03–08–2026

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರನ್ವಯ)

ಕರ್ನಾಟಕ ನಗರ ಮತ್ತು ಗರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂ ಉಪಯೋಗ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳು ಇದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾ ಯೋಜನೆಯಂತೆ ಭೂ ಉಪಯೋಗ	ಕೋರಿರುವ ಭೂ ಉಪಯೋಗ
1	ಶ್ರೀ ರಾಜೀವ್ ಲೋಚನಂ ಎ.ಬಿನ್ ಆತ್ಮರಾಮ್	ತುಮಕೂರು	ಊರ್ಡಿಗೆರೆ	ಬಡ್ಡಿಹಳ್ಳಿ	34/4	00 ಎಕರೆ 27 ಗುಂಟೆ ಪೈಕಿ 00 ಎಕರೆ 16.04 ಗುಂಟೆ	ವ್ಯವಸಾಯ	ವಸತಿ
		ಒಟ್ಟು				**00 ಎಕರೆ 16.04 ಗುಂಟೆ**		

ಷರಾ : ಪ್ರಶ್ನಿತ ಜಮೀನಿನಲ್ಲಿ ಪ್ರಾಧಿಕಾರದ ನಿಯಮಗಳನ್ವಯ ಹಾಗೂ ಕಾನೂನು ಬದ್ಧವಾಗಿ ವಿನ್ಯಾಸ ಅನುಮೋದನೆ ಪಡೆದು ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸವನ್ನು ಅಭಿವೃಧಿಪಡಿಸಿ ಸಾರ್ವಜನಿಕರಿಗೆ ನಿವೇಶನಗಳನ್ನು ನೀಡುವ ಮತ್ತು ಕಾಮಗಾರಿ ಕೆಲಸಗಳಲ್ಲಿ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.

ಸಹಿ/–
ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು

ತಳ ಸಮುದಾಯಗಳ ಆರ್ಥಿಕ ಶಕ್ತಿಗೆ ಸಹಕಾರ ಸಂಘಗಳು ಸಹಕಾರಿ: ರಾಜಣ್ಣ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ನಮ್ಮ ಬೆಳವಣಿಗೆಗೆ ಸಹಕಾರಿ ಸಂಘಗಳು ಸಹಕಾರಿಯಾಗಿವೆ. ತಳಮಟ್ಟದ ಸಮುದಾಯಗಳು ಶ್ರೇಯೋಭಿವೃದ್ಧಿಗೆ, ನಮ್ಮ ಶಕ್ತಿ ಸದುಪಯೋಗಪಡಿಸಿಕೊಂಡು ಅಭಿವೃದ್ಧಿಯಾಗಬೇಕು ಎಂದು ಮಾಜಿ ಸಹಕಾರ ಸಚಿವ, ಶಾಸಕ ಕೆ.ಎನ್. ರಾಜಣ್ಣ ಹೇಳಿದರು.

ನಗರದ ಕುಂಚಿಟಿಗರ ಸಮುದಾಯ ಭವನದಲ್ಲಿ ನಗರದ ನೀಲಕಂಠೇಶ್ವರಸ್ವಾಮಿ ಪತ್ತಿನ ಸಹಕಾರ ಸಂಘದರಜತ ಮಹೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ತುಮಕೂರಿನಲ್ಲಿ ಪ್ರತಿಯೊಂದು ತಳ ಸಮುದಾಯದವರೂ ಸಹಕಾರ ಸಂಘ ಸ್ಥಾಪನೆ ಮಾಡಿದ್ದಾರೆ. ಸಣ್ಣಸಣ್ಣ ಸಮುದಾಯದವರಿಗೆ ಸಾಲಸೌಲಭ್ಯ ಸಿಗದ ಸಂದರ್ಭದಲ್ಲಿ ತಮ್ಮದೇ ಸಹಕಾರ ಸಂಘಗಳಲ್ಲಿ ಸಾಲಸೌಕರ್ಯ ಪಡೆದು ಬೆಳವಣಿಗೆ ಆಗಬಹುದು. ಖಾಸಗಿಯವರಿಂದ ದುಬಾರಿ ಬಡ್ಡಿತೆತ್ತು ಸಾಲ ಪಡೆಯುವುದು ತಪ್ಪಬೇಕು ಎಂದರು.

ಹೊರಅರಿವಿನ ಕೊರತೆ ಇರುವ ತಳ ಸಮುದಾಯದವರಲ್ಲಿ ಅಸೂಯೆ, ದ್ವೇಷ ಬಂದರೆ ಅಭಿವೃದ್ಧಿ ಕುಂಟಿತವಾಗುತ್ತದೆ. ಸಹಕಾರ ಸಂಸ್ಥೆಗಳ ಸಣ್ಣಪುಟ್ಟ ಲೋಪಗಳನ್ನೇ ದೊಡ್ಡದು ಮಾಡಿದ್ವೇಷ ಸಾಧಿಸದೆ, ಸರಿಪಡಿಸಿಕೊಂಡು ಸರಿದಾರಿಯಲ್ಲಿ ಸಾಗುವ ಪ್ರಯತ್ನ ಮಾಡಬೇಕು. ಎಷ್ಟೇ ಕಷ್ಟವಿದ್ದರೂ ನಿಮ್ಮ ಮಕ್ಕಳಿಗೆ ಉನ್ನಯ ಶಿಕ್ಷಣ ಕೊಡಿಸಿ, ಅವರನ್ನು ಸಮಾಜದ ಆಸ್ತಿಯನ್ನಾಗಿ ಮಾಡಿ, ಶಿಕ್ಷಣ ಪಡೆಯದವರು ಸಮಾಜಕ್ಕೆ ಹೊರೆಯಾಗುತ್ತಾರೆ ಎಂದು ಹೇಳಿದರು.

ಶಾಸಕ ಜಿ.ಬಿ. ಜ್ಯೋತಿಗಣೇಶ್ ಮಾತನಾಡಿ, ಸಹಕಾರಿ ಸಂಘಸಂಸ್ಥೆಗಳು ದೇಶದ ಪ್ರಗತಿಗೆ, ಆರ್ಥಿಕ ಬೆಳವಣಿಗೆಗೆ ದೊಡ್ಡಕೊಡುಗೆ ನೀಡುತ್ತಿವೆ. ರಾಷ್ಟ್ರೀಕೃತ ಬ್ಯಾಂಕುಗಳಿಗಿಂದ ಸರಳವಾಗಿ ಸಾಲ ಪಡೆಯುವುದು ಕಷ್ಟವಾಗಿರುವಾಗ ಸುಲಭವಾಗಿ ಸಾಲಸೌಲಭ್ಯ ಪಡೆದು ವ್ಯವಹಾರ ನಡೆಸಲು ಸಹಕಾರಿ ಸಂಘಗಳು ಸಹಕಾರಿಯಾಗಿವೆ ಎಂದರು.

ಕುರುಹಿನ ಶೆಟ್ಟಿ ಸಮಾಜದ ಹುಬ್ಬಳ್ಳಿಯ ನೀಲಕಂಠಮಠದ ಶಿವಶಂಕರ ಶಿವಾಚಾರ್ಯ ಸ್ವಾಮೀಜಿ ಸಮಾರಂಭದ ಸಾನಿಧ್ಯ ವಹಿಸಿ, ನೀಲಕಂಠೇಶ್ವರ ಸ್ವಾಮಿ ಸಹಕಾರ ಸಂಘವು ದೊಡ್ಡ ಪ್ರಮಾಣದಲ್ಲಿ ಬೆಳೆದು ಸಂಭ್ರಮದಿಂದ ಶತಮಾನೋತ್ಸವ ಆಚರಿಸುವಂತಾಗಲಿ, ಸಹಕಾರ ಸಂಘಗಳ ಮೂಲಕ ಆರ್ಥಿಕ ಚಟುವಟಿಕೆಗಳಲ್ಲದೆ, ಸಮಾಜದಲ್ಲಿ ಭಾವೈಕ್ಯತೆ ಬೆಳೆಯಲು ಸಾಧ್ಯವಾಗುತ್ತದೆ. ಸಮಾಜ ಮುಖಿಯಾಗಿ ಕೆಲಸ ಮಾಡುವುದು ಉತ್ತಮ ಹವ್ಯಾಸ, ಅಂತಹವರನ್ನು ಪ್ರೋತಾಸಹಿಸಬೇಕು ಎಂದರು.

ಸಾನಿಧ್ಯವಹಿಸಿದ್ದ ರಾಮಕೃಷ್ಣ ವಿವೇಕಾನಂದ ಆಶ್ರಮದ ವೀರೇಶಾನಂದ ಸರಸ್ವತಿ ಸ್ವಾಮೀಜಿ ಮಾತನಾಡಿ, ಹಾಲಿನಲ್ಲಿ ಜೇನು ಬೆರೆತಂತೆ ಕುರುಹಿನಶೆಟ್ಟಿ ಸಮುದಾಯವು ಸಮಾಜದಲ್ಲಿ ಎಲ್ಲರೊಂದಿಗೆ ಸೌಹಾರ್ದತೆಯಿಂದ ಬೆರೆಯುತ್ತಾರೆ. ಸಹಕಾರ ಸಂಘದ ಮೂಲಕ ಸಮಾಜದ ಬೆಳವಣಿಗೆಯಾಗಲಿ. ಗಟ್ಟಿತನದ ನಾಯಕರಾಗಿ ಕೆ.ಎನ್, ರಾಜಣ್ಣನವರು ಜಿಲ್ಲೆಯಲ್ಲಿ ಆಗಬೇಕಾದ ಕೆಲಸಗಳನ್ನು ಬಿಡದೆ ಮಾಡಿದ್ದಾರೆ. ಸಹಕಾರಿ ಕ್ಷೇತ್ರ ವ್ಯಾಪಕಗೊಳ್ಳಲು ಸಹಕಾರ ನೀಡಿದ್ದಾರೆ ಎಂದು ಅಭಿನಂದಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನೀಲಕಂಠೇಶ್ವರ ಪತ್ತಿನ ಸಹಕಾರ ಸಂಘದಅಧ್ಯಕ್ಷ ಟಿ.ಹೆಚ್. ಶಿವಾನಂದ್ ಮಾತನಾಡಿ, 2001ರಲ್ಲಿ ಆರಂಭವಾದ ಸಂಘಕ್ಕೆ 25 ವರ್ಷತುಂಬಿದೆ. ಹಂತಹಂತವಾಗಿ ಪ್ರಗತಿ ಸಾಧಿಸುತ್ತಾ ಸಂಘ ಬೆಳವಣಿಗೆ ಕಂಡಿದೆ. 11 ಲಕ್ಷ ಷೇರು ಮೊತ್ತ ಹಾಗೂ 31 ಲಕ್ಷ ರೂ.ಪ್ರಾಥಮಿಕ ಬಂಡವಾಳದಿಂದ ಸಂಘ ಆರಂಭವಾಯಿತುಎಂದರು.

ಕೈಗಾರಿಕಾ ಇಲಾಖೆ ಉಪನಿರ್ದೇಶಕಆರ್.ಹೆಚ್. ನಾಗಭೂಷಣ್, ನೇಯ್ಗೆ ನುಡಿ ಸಂಪಾದಕ ಬೆಳ್ಳಿಚುಕ್ಕಿ ವೀರೇಂದ್ರ, ಎಂ.ಪಿ. ಶಿವಕುಮಾರ್, ಕೆ.ಹೆಚ್. ನಾರಾಯಣ್, ಕೆ.ಸಿ.ಕೃಷ್ಣಶೆಟ್ಟಿ, ನೀಲಕಂಠೇಶ್ವರಸ್ವಾಮಿ ಪತ್ತಿನ ಸಹಕಾರ ಸಂಘದಉಪಾಧ್ಯಕ್ಷಎಸ್.ಎನ್, ಬಸವರಾಜು, ನಿರ್ದೇಶಕರಾದ ಬಿ.ಎನ್. ಜಯಚಂದ್ರ, ಬಿ.ಎಲ್. ಗೋವಿಂದಶೆಟ್ಟಿ, ಎನ್.ಎಸ್. ಕೃಷ್ಣಮೂರ್ತಿ, ಟಿ.ಆರ್.ದಿನೇಶ್‌ಕುಮಾರ್, ಎಸ್.ಎಸ್. ಸೋಮಶೇಖರ್, ಟಿ.ಪಿ.ಜಗದೀಶ್, ಟಿ.ಆರ್. ಮುಕ್ತಾಂಭ, ಯಶೋಧ, ಕಮಲ ಮೊದಲಾದವರು ಭಾಗವಹಿಸಿದ್ದರು.

ಕೆಎನ್‌ಆರ್ ಗೆ ಮಂತ್ರಿ ಸ್ಥಾನ ಬೇಕು



ಮಧುಗಿರಿ ; ಮಂತ್ರಿಗಿರಿ ಕೆಎನ್ ಆರ್ ಕೈ ತಪ್ಪಿದ್ದು ಮುಂದೆ ಜಿಲ್ಲೆಯಲ್ಲಿ ಕಾಂಗ್ರೆಸ್ ಬಲವರ್ಧನೆ ಕಷ್ಟಸಾಧ್ಯ ಎಂದು ತಾಲೂಕು ಕುಂಚಿಟಿಗ ಒಕ್ಕಲಿಗರ ಸಂಘದ ನಿರ್ದೇಶಕ ದೀಪಕ್ ಹೊನ್ನಾಪುರ ತಿಳಿಸಿದ್ದು, ಮುಂದೆ ಕಾಂಗ್ರೆಸ್ ಪಕ್ಷಕ್ಕೆ ಹೊಡೆತ ಬೀಳುವ ಆತಂಕ ಎದುರಾಗಿದೆ ಎಂದರು.

ಪಟ್ಟಣದ ಸಂಘದ ಆವರಣದಲ್ಲಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಡಾ.ಜಿ. ಪರಮೇಶ್ ರವರಿಗೆ ಸರಿಸಾಟಿಯಾಗಿ ಕೆ.ಎನ್.ರಾಜಣ್ಣ ಕಾಂಗ್ರೆಸ್ ಪಕ್ಷವನ್ನು ಕಟ್ಟುತ್ತಿದ್ದಾರೆ. ಈ ಸಮಯದಲ್ಲಿ ವಿರೋಧ ಪಕ್ಷಗಳ ಎಲ್ಲ ಟೀಕೆಗಳಿಗೂ ಅಭಿವೃದ್ಧಿ ರೂಪದಲ್ಲಿ ಉತ್ತರ ನೀಡುತ್ತಿರುವ ರಾಜಕಾರಣ ಕೆ.ಎನ್.ರಾಜಣ್ಣ, ಇಂತಹ ವ್ಯಕ್ತಿಗೆ ಚುನಾವಣೆ 2 ವರ್ಷದಲ್ಲಿ ಎದುರಾಗಲಿದ್ದು ಪಕ್ಷಕ್ಕೆ ಬಹಳ ಸಂಕಷ್ಟ ತರುತ್ತದೆ. ಹಾಗಾಗಿ ತಕ್ಷಣ ಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಸಿಎಂ ಸಿದ್ದರಾಮಯ್ಯನವರು ಒಳ್ಳೆಯ ನಿರ್ಧಾರ ಕೈಗೊಂಡು ಕೆ.ಎನ್.ರಾಜಣ್ಣ ನವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಹೈ ಕಮಾಂಡ್ ಮನವೊಲಿಸಿ ಮಂತ್ರಿ ಸ್ಥಾನ ನೀಡಬೇಕು ಎಂದು ಆಗ್ರಹಿಸಿದ್ದಾರೆ.

'ಅನ್ನ ಪ್ರಸಾದ ಕೇಂದ್ರಗಳಲ್ಲಿ ಪ್ರೀತಿ, ಭಕ್ತಿಯ ಆತಿಥ್ಯ ದೊರೆಯಲಿ'

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಅಯ್ಯಪ್ಪಸ್ವಾಮಿ ಭಕ್ತರಿಗೆ ಅನ್ನಪ್ರಸಾದ ಕೇಂದ್ರಗಳಲ್ಲಿ ಪ್ರೀತಿ, ಭಕ್ತಿಯಿಂದ ಪ್ರಸಾದ ವಿತರಿಸಿ ಆತಿಥ್ಯ ನೀಡಬೇಕು. ಅನ್ನವನ್ನು ಅಯ್ಯಪ್ಪನ ಪ್ರಸಾದವೆಂದು, ಭಕ್ತರನ್ನು ಸ್ವತ: ಅಯ್ಯಪ್ಪ ಸ್ವಾಮೀಯೇ ಎಂದು ಭಾವಿಸಬೇಕು ಎಂದು ಶಬರಿಮಲೈ ಅಯ್ಯಪ್ಪ ಸೇವಾ ಸಮಾಜಂನ ರಾಷ್ಟ್ರೀಯ ಅಧ್ಯಕ್ಷ ಮುರುಗೇಶ್ ಸೆಲ್ವಂ ತಿಳಿಸಿದರು.

ನಗರದ ಗಾರ್ಡನ್ ರಸ್ತೆಯ ಅಯ್ಯಪ್ಪಸ್ವಾಮಿ ದೇವಸ್ಥಾನ ಸಭಾಂಗಣದಲ್ಲಿ ಭಾನುವಾರ ನಡೆದ ಶಬರಿಮಲೈ ಅಯ್ಯಪ್ಪ ಸೇವಾ ಸಮಾಜಂನ ರಾಜ್ಯ ಅನ್ನಪ್ರಸಾದ ಸಮಿತಿ ಸಭೆ ಹಾಗೂ ರಾಜ್ಯ ಕಾರ್ಯಕಾರಿಣಿ ಉದ್ಘಾಟಿಸಿ ಮಾತನಾಡಿದ ಅವರು, ಶಬರಿಮಲೈಗೆ ಹೋಗುವ ಭಕ್ತರು ಊಟಕ್ಕೆ ಪರದಾಡಬಾರದು, ಮಾಲಾಧಾರಿಗಳು ಊಟಕ್ಕಾಗಿ ಹೋಟೆಲ್‌ಗಳಿಗೆ ಹೋಗುವುದಿಲ್ಲ ಅಂತಹವರಿಗಾಗಿ 50–80 ಕಿಲೋಮೀಟರ್‌ಗೆ ಒಂದರಂತೆ ಅನ್ನ ಪ್ರಸಾದ ಕೇಂದ್ರ ತೆರೆದು ಸೇವೆ ಒದಗಿಸಬೇಕು ಎಂದು ಸಲಹೆ ಮಾಡಿದರು.

ರಾಷ್ಟ್ರೀಯ ಅನ್ನಪ್ರಸಾದ ಸಮಿತಿ ಅಧ್ಯಕ್ಷ ಟಿ.ಬಿ. ಶೇಖರ್ ಅವರು ಅನ್ನಪ್ರಸಾದ ಕೇಂದ್ರಗಳನ್ನು ಯಾಕೆ ಶುರು ಮಾಡಲಾಯಿತು ಎಂದು ತಿಳಿಸಿ, ಅಯ್ಯಪ್ಪಸ್ವಾಮಿ ಭಕ್ತರಿಗಾಗಿ 2008 ರಲ್ಲಿ ಅನ್ನಪ್ರಸಾದ ಕೇಂದ್ರಗಳನ್ನು ಆರಂಭಿಸಲಾಯಿತು. ಶಬರಿ ಮಲೈಗೆ ತೆರಳುವ ಭಕ್ತರಿಗೆ ಅನ್ನಪ್ರಸಾದ ನೀಡಬೇಕು ಎನ್ನುವ ಕಾರಕ್ಕೆ ದಕ್ಷಿಣ ಭಾರತದ ಎಲ್ಲಾ ರಾಜ್ಯಗಳಲ್ಲೂ ಅನ್ನಪ್ರಸಾದ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಹೇಳಿದರು.

ಅಯ್ಯಪ್ಪಸ್ವಾಮಿ ಭಕ್ತರು ಸುರಕ್ಷಿತವಾಗಿ ಶಬರಿಮಲೈಗೆ ಹೋಗಿ ಬರುವ ಮಾರ್ಗ ಮಧ್ಯೆ ಯಾವುದೇ ತೊಂದರೆಯಾದರೆ ನಮ್ಮ ಸೇವಾ ಕೇಂದ್ರಗಳಲ್ಲಿ ನೆರವು ದೊರಕಿಸುವ ಪ್ರಯತ್ನ ಮಾಡಲಾಗುತ್ತದೆ. ಕಳೆದ ವರ್ಷ 42 ಲಕ್ಷ ಜನರಿಗೆ ಅನ್ನ ಪ್ರಸಾದ ವ್ಯವಸ್ಥೆ ಮಾಡಿತ್ತು. ಈ ಬಾರಿ ಸುಮಾರು 80 ಲಕ್ಷ ಜನರಿಗೆ ಅನ್ನಪ್ರಸಾದ ನೀಡುವ ಗುರಿ ಹೊಂದಿದೆಎಂದು ಹೇಳಿದರು.

ಶಬರಿಮಲೈ ಅಯ್ಯಪ್ಪ ಸೇವಾ ಸಮಾಜಂನ ರಾಷ್ಟ್ರೀಯ ಉಪಾಧ್ಯಕ್ಷ ಆನಂದ್ ವಾಮನ ನಾಯಕ್‌ಅವರು ಸಭೆಯ ಅಧ್ಯಕ್ಷತೆವಹಿಸಿದ್ದರು. ಸಂಘಟನಾ ಕಾರ್ಯದರ್ಶಿ ಎನ್. ರಾಜನ್, ಜಂಟಿ ಕಾರ್ಯದರ್ಶಿ ವಿನೋದ್ ಕುಮಾರ್, ಸದಸ್ಯರಾದ ಸಿ.ಎಸ್.ವಿ. ಪ್ರಸಾದ್, ಸಮಾಜಂನ ರಾಜ್ಯ ಅಧ್ಯಕ್ಷ ಎನ್. ಜಯರಾಮ್, ರಾಷ್ಟ್ರೀಯ ಅನ್ನಪ್ರಸಾದ ಸಮಿತಿ ಸಂಯೋಜಕ ಶೀತಕಲ್ ಕೃಷ್ಣಯ್ಯ, ರಾಜ್ಯ ಉಪಾಧ್ಯಕ್ಷ ಸಂಪತ್ ಕುಮಾರ್, ಅಯ್ಯಪ್ಪಸ್ವಾಮಿ ಸೇವಾ ಸಮಿತಿ ಜಿಲ್ಲಾಧ್ಯಕ್ಷ ಆರ್.ಎನ್. ನಾಗೇಂದ್ರ, ಸೇರಿದಂತೆ ವಿವಿಧ ಜಿಲ್ಲೆಗಳ ಅನ್ನದಾಸೋಹ ಸಮಿತಿಅಧ್ಯಕ್ಷರು, ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಗೆ ರಂಗಭೂಮಿ ಅಗತ್ಯ



ಸೂರ್ಯಪ್ರಗತಿನ್ಯೂಸ್.ಕಾಂ

ವರದಿ; ಕಾಂತರಾಜು ಕೌತಮಾರನಹಳ್ಳಿ

ತುಮಕೂರು: ವಿದ್ಯಾರ್ಥಿಗಳ ಕ್ರಿಯಾಶೀಲತೆ, ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ರಂಗಭೂಮಿ ಅತ್ಯಂತ ಅವಶ್ಯಕ ಎಂದು ಹೊನ್ನೇನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಹೆಚ್.ಎನ್. ಕೃಷ್ಣಕುಮಾರ್ ಪ್ರತಿ ಪಾದಿಸಿದರು.ನಗರದ ಹೊನ್ನೇನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಸಾಲುಮರದ ತಿಮ್ಮಕ್ಕ ಸಮುದಾಯ ಸೇವಾ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ 'ಅರಿವಿನ ಗೀತೆಗಳು' ಹಾಗೂ ನಾಟಕ ಪ್ರದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿತವಾಗದೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದಾಗ ಮಾತ್ರ ಅವರಲ್ಲಿನ ಸೃಜನಶೀಲತೆ ಹೆಚ್ಚಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಸಹ ಶಿಕ್ಷಕಿಯರಾದ ವೀಣಾ ಬಿ.ಎಮ್, ನಳಿನಾಕ್ಷಿ, ಹಿರಿಯ ರಂಗಭೂಮಿ ಕಲಾವಿದ ಬಾಲಕೃಷ್ಣ ಗೊಲ್ಲಹಳ್ಳಿ ಹಾಗೂ ನಟ ಮತ್ತು ರಂಗ ನಿರ್ದೇಶಕ ಗಂಗಬೈರಯ್ಯ, ಡಿಸಿಕುಮಾರ್, ಬಾಲಾಜಿ, ಸಾಗರ್, ತುಳಸಿ ದೇವಿ, ಲೀಲಾ, ಉಪಸ್ಥಿತರಿದ್ದರು. ಇದೇ ವೇಳೆ ಸಾಲುಮರದ ತಿಮ್ಮಕ್ಕ ಸಮುದಾಯ ಸೇವಾ ಟ್ರಸ್ಟ್‌ನ ಕಲಾ ತಂಡದವರು ನಡೆಸಿಕೊಟ್ಟ ಅರಿವಿನ ಗೀತೆಗಳ ಗಾಯನ ಮತ್ತು ನಾಟಕ ಪ್ರದರ್ಶನವು ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಅಪಾರ ಮೆಚ್ಚುಗೆಗೆ ಪಾತ್ರವಾಯಿತು.



EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. CONTACT : 9901010109 GMAIL: suryapragathi2021@gmail.com.